# ECHO OF HIS CALL

# ಕರೆಯ ಪ್ರತಿಧ್ವನಿ

KANNADA

ECHO OF HIS CALL 1969-2019 GOLDEN JUBILEE (ECHO GROUP)

**India's National Spiritual Newspaper** ₹ 10/-

Published monthly in ENGLISH, TAMIL, MALAYALAM, TELUGU, HINDI, KANNADA, MARATHI, BENGALI, GUJARATI, ODIYA, ASSAMESE, PUNJABI, NEPALI, URDU, SINHALA & AFRIKAN

Editor : S. SAM SELVA RAJ | 16 Languages | Associate Editor : Rev. R. Rama Krishna

Vol. XXIV | DECEMBER 2022 | No. 11


## ಪರಿಶುದ್ಧ ಸತ್ಯವೇದ

**ದಯಮಾಡಿ ಈ ವಾಕ್ಯ ಭಾಗಗಳನ್ನು ಕಂಠ ಪಾಠ ಮಾಡಿರಿ.** (ಲೂಕ 1:26-33)

26. ಆರನೆಯ ತಿಂಗಳಲ್ಲಿ ದೇವರು ಗಬ್ರಿಯೇಲನೆಂಬ ತನ್ನ ದೂತನನ್ನು ಗಲಿಲಾಯ ಸೀಮೆಯ ನಜರೇತೆಂಬ ಊರಿಗೆ ಒಬ್ಬ ಕನ್ಯೆಯ ಬಳಿಗೆ ಕಳುಹಿಸಿದನು.
27. ಆ ಕನ್ಯೆಯ ಹೆಸರು ಮರಿಯಳು; ಆಕೆಯು ದಾವೀದನ ಮನೆತನದ ಯೋಸೇಫನೆಂಬ ಪುರುಷನಿಗೆ ನಿಶ್ಚಿತಾರ್ಥವಾಗಿದ್ದಳು.
28. ಆ ದೂತನು ಆಕೆಯ ಬಳಿಗೆ ಬಂದು ದೇವರ ದಯೆ ಹೊಂದಿದದವಳೇ, ನಿನಗೆ ಶುಭವಾಗಲಿ.
29. ಕರ್ತನು ನಿನ್ನ ಸಂಗಡ ಇದ್ದಾನೆ ಅಂದನು. ಆಕೆಯು ಆ ಮಾತಿಗೆ ತತ್ತರಿಸಿ - ಇದೆಂಥ ಆಶೀರ್ವಾದ ಎಂದು ಯೋಚನೆ ಮಾಡುತ್ತಿರಲಾಗಿ.
30. ಆ ದೂತನು ಆಕೆಗೆ ಮರಿಯಳೇ, ಹೆದರಬೇಡ; ನಿನಗೆ ದೇವರ ದಯೆ ದೊರಕಿತು.
31. ಇಗೋ, ನೀನು ಗರ್ಭಿಣಿಯಾಗಿ ಒಬ್ಬ ಮಗನನ್ನು ಹೆರುವಿ; ಆತನಿಗೆ ಯೇಸುವೆಂದು ಹೆಸರಿಡಬೇಕು.
32. ಆತನು ಮಹಾಪುರಷನಾಗಿ ಪರಾತ್ಪರನ ಕುಮಾರನೆನಿಸಿಕೊಳ್ಳುವನು; ಇದಲ್ಲದೆ ದೇವ ರಾಗಿರುವ ಕರ್ತನು ಆತನ ಮೂಲ ಪಿತನಾದ ದಾವೀದನ ಸಿಂಹಾಸನವನ್ನು ಆತನಿಗೆ ಕೊಡುವನು.
33. ಆತನು ಯಾಕೋಬನ ವಂಶವನ್ನು ಸದಾ ಕಾಲ ಆಳುವನು; ಆತನ ರಾಜ್ಯಕ್ಕೆ ಅಂತ್ಯವೇ ಇಲ್ಲ ಎಂದು ಹೇಳಿದನು.



# ಕ್ರಿಸ್ತ ಜಯಂತಿಯ ಆಶೀರ್ವಾದಗಳು !

## BLESSINGS OF CHRISTMAS!

- ಪಾ. ಕೆ. ಆರ್. ರಾಜಶೇಖರನ್

ಪ್ರಪಂಚದ್ಯಾಂತ ಅನೇಕ ಜನರು ಮೊದಲ ಕ್ರಿಸ್ತ ಜಯಂತಿಯನ್ನು ತಪ್ಪಿಸಿಕೊಂಡರು. ಅವರು ಅದನ್ನು ನಿರ್ಲಕ್ಷಿಸಿದ್ದರು. ಅವರಿಗೆ ಗೊತ್ತಿರಲಿಲ್ಲ ಅದು ಆಗಿದೆ ಎಂದು. ಅದು ನಡೆಯಿತು ಎಂದು ಅವರಿಗೆ ಗೊತ್ತಿರಲಿಲ್ಲ. ಅದರ ವಿಶೇಷತೆಯು ಅವರಿಗೆ ಗೊತ್ತಿರಲಿಲ್ಲ. ಕೇವಲ ಕೆಲವು ಜನರು ಮಾತ್ರ ಮೊದಲ ಕ್ರಿಸ್ತ ಜಯಂತಿಯಲ್ಲಿ ಇದ್ದರು. ಈಗ 2000 ವರ್ಷಗಳ ನಂತರ, ಇಡೀ ಲೋಕಕ್ಕೆ ಕ್ರಿಸ್ತ ಜಯಂತಿ ಏನು ಎಂಬುದು ಗೊತ್ತಿದೆ. ಲಕ್ಷಾಂತರ ಜನರು ಇಡೀ ಪ್ರಪಂಚದಲ್ಲಿ ಆರಾಧನೆ ಮಾಡುವುದಕ್ಕೆ ಹೋಗುತ್ತಾರೆ ಮತ್ತು ಯೇಸು ಕ್ರಿಸ್ತನ ಹುಟ್ಟಿದ ದಿನವನ್ನು ಆಚರಿಸುತ್ತಾರೆ. ಮರಿಯಳು, ಯೋಸೇಫ, ಕುರುಬರು, ಜೋಯಿಸರು ಮೊದಲ ಕ್ರಿಸ್ತ ಜಯಂತಿಯ ಬಗ್ಗೆ ತಿಳಿದಿರುವ ಕೆಲವೇ ಜನರು. ಅವರನ್ನು ವಿಶೇಷವಾಗಿಸಿದ್ದು ಏನು, ಅವರು ಮೊದಲಯದರಲ್ಲಿಯೇ ಇರಲು ಸಾಧ್ಯವಾಯಿತು? ದೇವರು ತಾನು ಆಶೀರ್ವದಿಸಲಿರುವವರನ್ನು ಹೇಗೆ ಆರಿಸುತ್ತಾನೆ? ದೇವರು ಯಾರನ್ನು ಆರಿಸುತ್ತಾನೆ ಮತ್ತು ಬಳಸುತ್ತಾನೆ ಎಂಬುದರ ಕುರಿತು ನಾನು ಒಂದು ಕ್ಷಣ ಯೋಚಿಸಲು ಬಯಸುತ್ತೇನೆ.

ಸತ್ಯವೇನೆಂದರೆ, ದೇವರು ನಿಮ್ಮನ್ನು ಆಶೀರ್ವದಿಸುವನು. ಮರಿಯಳು, ಯೋಸೇಫನು, ಕುರುಬರು ಮತ್ತು ಜೋಯಿಸರು ಮಾಡಿದ ಸಂಗತಿಗಳನ್ನು ನೀವು ಮಾಡಿದರೆ, ನೀವು ಈಗ ಮಾಡಿದರೆ, ಆಶೀರ್ವದಿಸಲ್ಪಟ್ಟ ಈ ಕ್ರಿಸ್ತ ಜಯಂತಿಯು ನಿಮ್ಮದಾಗುತ್ತದೆ. **ಯಾಕೆಂದರೆ ನೀವು ಅದನ್ನು ಮಾಡಿದಾಗ, ಯೋಸೇಫ ಸಹಕರಿಸಿದನು ಮತ್ತು ಕುರುಬರು ಆಚರಿಸಿದರು ಮತ್ತು ಮರಿಯಳು ಆಲೋಚಿಸಿದಳು ಮತ್ತು ಜೋಯಿಸರು ಪವಿತ್ರಗೊಳಿಸಿದರು. ಬನ್ನಿ ನಾವು ಒಂದದನ್ನು ಧ್ಯಾನ ಮಾಡೋಣ.**

### 1. ಯೋಸೇಫನು ದೇವರ ಯೋಜನೆಗೆ ಸಹಕರಿಸಿದನು !

**ಯೇಸು ಕ್ರಿಸ್ತನ ಜನನವು ಹೇಗಾಯಿತೆಂದರೆ ಆತನ ತಾಯಿಯಾದ ಮರಿಯಳನ್ನು ಯೋಸೇಫನಿಗೆ ನಿಶ್ಚಯ ಮಾಡಿರಲಾಗಿ ಅವರು ಕೂಡುವುದಕ್ಕಿಂತ ಮುಂಚೆ ಆಕೆಯು ಪವಿತ್ರಾತ್ಮನಿಂದ ಬಸುರಾಗಿದ್ದದ್ದು ತಿಳಿದು ಬಂತು. ಆದರೆ ಆಕೆಯ ಗಂಡನಾದ ಯೋಸೇಫನು ಸಜ್ಜನನಾಗಿದ್ದು ಆಕೆಯನ್ನು ಬೈಲಿಗೆ ತರುವುದಕ್ಕೆ ಮನಸ್ಸಿಲ್ಲದೆ, ಯಾರಿಗೂ ತಿಳಿಯದಂತೆ ಆಕೆ ಯನ್ನು ಬಿಟ್ಟು ಬಿಡಬೇಕೆಂದಿದ್ದನು. ಅವನು ಇದನ್ನು ಆಲೋಚಿಸುತ್ತಿರುವಾಗ ಕರ್ತನ ದೂತನು ಅವನಿಗೆ ಕನಸಿನಲ್ಲಿ ಕಾಣಿಸಿಕೊಂಡು ಎಲೈ ಯೋಸೇಫನೇ, ದಾವೀದನ ವಂಶದವನೇ, ನಿನ್ನ ಹೆಂಡತಿಯಾದ ಮರಿಯಳನ್ನು ಸೇರಿಸಿಕೊಳ್ಳುವುದಕ್ಕೆ ಅಂಜಬೇಡ. ಆಕೆಯ ಗರ್ಭವು**



(4ನೇ ಪುಟಕ್ಕೆ)

# ECHO OF HIS CALL - (1969-2019 GOLDEN JUBILEE YEAR)

## *from your dearly beloved brother...*

(ECHO GROUP)





**OUR MISSION POLICY**

We should expound and teach the contemporary generation the undiluted teachings of the ancient and early Apostles. It is the need of the hour.

**CHIEF EDITOR**
Angeline Selvakumari Henry, M.A., M.Ed.

**MANAGING EDITOR**
Pastor Alex Samson Sam, B.Th., M.Div.

**ADMINISTRATION**
Bro. N. Prakasam, M.A., General Manager

**EDITORIAL BOARD**
Sis. Jesy Veena Sam
Sis. Serena Bevin, M.A., M.Phil., B.Ed.
Rev. Dr. K.R. Rajasekaran
Dr. A. Richard Samuel, M.A., Ph.D.

**EDITOR, PUBLISHER & PRINTER**
Pastor S. SAM SELVA RAJ
Echo of His Call Printers
10, Mohammed Abdullah 2nd Street,
Chepauk, Chennai- 600 005, India.
Phone : (+ 91- 44) 2852 8282, 2852 9293, 2854 7766
Cell : (+91) 98410 71852, 95661 31858

**CORE LEADERS**
Bro. K. Puratchivendan
Bro. A. Edward Durai
Bro. A. Alvin
Bro. K. Abraham
Sis. Dhanalakshmi Chinnaiah

**E.mail ID**
sam@echoofhiscall.org
biblecor@yahoo.co.in

**WEBSITES**
www.echoofhiscall.org
www.stpaulsmatriculation.com

**YOUTUBE CHANNEL**
Echo of His Call

ಆದರೆ ಮೋಶೆ ಆ ಜನರಿಗೆ-ನೀವು ಅಂಜಬೇಡಿರಿ; ಸುಮ್ಮನೆ ನಿಂತುಕೊಂಡಿದ್ದು ಯೆಹೋವನು ಈ ಹೊತ್ತು ನಿಮ್ಮನ್ನು ರಕ್ಷಿಸುವ ರೀತಿಯನ್ನು ನೋಡಿರಿ. ನೀವು ಈ ಹೊತ್ತು ನೋಡುವ ಐಗುಪ್ತರನ್ನು ಇನ್ನು ಮುಂದೆ ಎಂದಿಗೂ ನೋಡುವುದಿಲ್ಲ. (ವಿಮೋಚನಕಾಂಡ 14:13.)

ಪ್ರೀತಿಯುಳ್ಳ ಸಹೋದರ ಸಹೋದರಿಯರೇ,

ನಮ್ಮ ತಂದೆಯಾದ ದೇವರಿಂದ ನಿಮಗೆ ಕೃಪೆ ಮತ್ತು ಶಾಂತಿಯುಂಟಾಗಲಿ. 2022 ರಲ್ಲಿ ನಮ್ಮನ್ನು ಆಶೀರ್ವದಿಸಿದ ನಮ್ಮ ಕರ್ತನಾದ ದೇವರು 2023 ಹೊಸ ವರ್ಷವಡೀ ನಿಮ್ಮೊಂದಿಗೆ ಇರುತ್ತಾನೆ.

ದೇವರ ಕೃಪೆಯಿಂದ ನೀವೆಲ್ಲರೂ ಚೆನ್ನಾಗಿ ಇದ್ದೀರೆಂದು ನಾವು ನಂಬುತ್ತೇವೆ. ನಮ್ಮ ನಿರಂತರ ಪ್ರಾರ್ಥನೆ ಮತ್ತು ವಿಜ್ಞಾಪನೆಗಳಿಂದ ನಿಮ್ಮನ್ನು ನಾವು ಪ್ರಾರ್ಥನೆಯಲ್ಲಿ ಜ್ಞಾಪಿಸಿಕೊಳ್ಳುತ್ತೇವೆ. ಬರುವಂತಹ ದಿನಗಳಲ್ಲಿ ದೇವರು ನಿಮ್ಮ ಜೀವನದಲ್ಲಿ ನಿಶ್ಚಯವಾಗಿ ಅದ್ಭುತ ಕಾರ್ಯಗಳನ್ನು ಮಡುತ್ತಾನೆ. ಅದ್ಭುತ ಕಾರ್ಯಕ್ಕಾಗಿ ಆತನನ್ನು ಈ ಹೊತ್ತು ನಂಬಿರಿ!

ಭಾರತ ಮತ್ತು ನೆರೆಯ ಪ್ರದೇಶಗಳಲ್ಲಿ ತಲುಪದ ಜನರನ್ನು ತಲುಪುವಲ್ಲಿ ನಾವು ತುಂಬಾ ಕಾರ್ಯನಿರತರಾಗಿದ್ದೇವೆ. ಏತನ್ಮಧ್ಯೆ ನಾವು ನಮ್ಮ **ನೆಹಮೀಯ ಸತ್ಯವೇದ ಕಾಲೇಜು** ವಿದ್ಯಾರ್ಥಿಗಳನ್ನು ದೊಡ್ಡ ಸುಗ್ಗಿಯ ತಯಾರಿಗಾಗಿ ಸಜ್ಜುಗೊಳಿಸುತ್ತಿದ್ದೇವೆ. ಅವರು ಸಂತೋಷವಾಗಿ ಅಭ್ಯಾಸ ಮಾಡುತ್ತಾ ಮತ್ತು ಸೇವಾ ಕ್ಷೇತ್ರ ತರಬೇತಿಗಳನ್ನು ಮಾಡುತ್ತಿದ್ದಾರೆ. ಸತ್ಯವೇದ ಕಾಲೇಜು ಚಟುವಟಿಕೆಗಳಿಗಾಗಿ ನಿಮ್ಮ ಸಹಾಯ ಮತ್ತು ಪ್ರಾರ್ಥನೆಗಾಗಿ ನಾವು ನಿಮಗೆ ಧನ್ಯವಾದಗಳನ್ನು ಸಲ್ಲಿಸುತ್ತೇವೆ. ದಯಮಾಡಿ ನಿರಂತರವಾಗಿ ಮಾಡುತ್ತಾ ಇರಿ.



ನ್ನ ಇತ್ತೀಚಿನ ದಕ್ಷಿಣ ಭಾರತ ಭೇಟಿಯ ಸಮಯದಲ್ಲಿ ದೇವರ ಸೇವೆಯನ್ನು ನಮ್ಮ ಕೆಲವು ಸಹೋದ್ಯೋಗಿಗಳೊಂದಿಗೆ ನಮ್ಮ ಸಂಬಂಧವನ್ನು ಬಲಪಡಿಸಲು ಸಮರ್ಥರಾಗಿದ್ದೇವೆ. ಆಯಾ ಪ್ರದೇಶಗಳಲ್ಲಿ ಉಚಿತ ವಿತರಣೆಗಾಗಿ ನಾವು ಅವರಿಗೆ ಸುವಾರ್ತೆ ಕರಪತ್ರಗಳನ್ನು ಮತ್ತು ಪುಸ್ತಕಗಳ ಕಟ್ಟುಗಳನ್ನು ಆಶೀರ್ವದಿಸಲು ಸಾಧ್ಯವಾಯಿತು. ಆತನ ಕರೆಯ ಸುವಾರ್ತೆ




*Pr. Jacob Jeya Kumar, our Gospel Tract Distributor at Villuppuram town.*



*Bro. Solomon Manoharan, businessman, 99 K.M. Coffee Magic & Village Pastor, Mullaivanan, our BIBLECOR Bible Correspondence Course Graduate, Cheyyoor.*



*Pr. Jeba Daniel, Valliyoor town.*




*Pr. Stephen Karthik, Virudhunagar town.*

**Our Ministries:** ECHO OF HIS CALL Monthly Magazines (16 languages) ▪ BIBLECOR - Postal Courses (3 languages) ▪ Online Courses ▪ Theological Correspondence Courses (2 languages) ▪ Church Planting ▪ Nehemiah Bible Colleges ▪ Gospel Printing Press ▪ Great Commission Partners ▪ St. Paul's Matriculation School ▪ Crusades ▪ Community Development

ಮುದ್ರಣಾಲಯ ಮತ್ತು ಸಾಹಿತ್ಯ ಕಾರ್ಯಕರ್ತರಿಗೆ ನಮ್ಮ ಧನ್ಯವಾದಗಳು. ನಾವು ಪ್ರತಿದಿನ ಅತ್ಯುತ್ತಮ ಪ್ರತ್ಯುತ್ತರ ಪಡೆದುಕೊಳ್ಳುತ್ತಾ ಇದ್ದೇವೆ. ಅನೇಕ ಕಡೆಗಳಲ್ಲಿ ನಾವು ಯೌವ್ವಸ್ಥರಿಗಾಗಿ ಸೆಮಿನರಿಗಳನ್ನು ಅಯೋಜಿಸಿದ್ದೆವು. ಸಹೋದರಿ. ಇವ್ಯಾಂಜಿಲಿನ್ ಸೆಲ್ವಕುಮಾರಿಯನ್ನು, ಘನ. ಡಾ. ಸನ್ನಿಪ್ರಸಾದ್, ಘನ. ಡಾ. ಆನಂದ ಬಾಬು ಮುಂತಾದವರನ್ನು ದೇವರು ಉಪಯೋಗಿಸಿಕೊಂಡನು.



***Sis. Angeline Selvakumari***



***Rev. Dr. Sunny Prasad***



***Rev. Dr. Anand Babu***

ಪ್ರಿಯ ಸ್ನೇಹಿತರೇ, ಇಲ್ಲಿ ದೇವರ ಸೇವೆಯನ್ನು ಮಾಡುವುದು ಸುಲಭವಲ್ಲ. ನಮ್ಮ ಕಾರ್ಮಿಕರ ಕುಟುಂಬಗಳಲ್ಲಿ ಅನಾರೋಗ್ಯ, ಸೈತಾನನ ನೇರ ದಾಳಿ, ರಾಜಕೀಯ ಶಕ್ತಿಗಳು, ಕ್ರೈಸ್ತ ವಿರೋಧಿ ಅಂಶಗಳು, ಆರ್ಥಿಕ ನಿರ್ಬಂಧಗಳು ಮುಂತಾದ ವಿವರಿಸಲಾಗದ ಮತ್ತು ಗುರುತಿಸಲಾಗದ ದುಷ್ಟ ಶಕ್ತಿಗಳ ವಿರುದ್ಧ ನಾವು ಹೋರಾಡಬೇಕಾಗಿದೆ. ನಾವು ನಿಜವಾಗಿ ಸಂದಿಗ್ಧ ಸನ್ನಿವೇಶಗಳಿಂದ ಹೋರಾಡುತ್ತಾ ಇದ್ದೇವೆ. ಕೇವಲ ನಾವು ಮಾತ್ರ ಅಲ್ಲ. ನಿಜವಾದ ಎಲ್ಲಾ ದೇವರ ಸೇವಕರುಗಳು ಒಂದೇ ಹಡಗನಲ್ಲಿ ಪಯಣಿಸುತ್ತಾ ಇದ್ದಾರೆ. ನಿಮ್ಮಂತಹ ಜನರು ನಿಮ್ಮ ಪ್ರಾರ್ಥನೆ ಮತ್ತು ಬೆಂಬಲದ ಮೂಲಕ ನಮ್ಮನ್ನು ಎತ್ತಿ ಹಿಡಿಯಲು ಮುಂದೆ ಬರದಿದ್ದರೆ, ಕಳೆದು ಹೋದ ಆತ್ಮಗಳನ್ನು ತಲುಪಲು ನಾವು ಮುಂದೆ ಹೋಗುವುದು ತುಂಬಾ ಕಷ್ಟ.

ಆದುದರಿಂದ, ದಯಮಾಡಿ ಮುಂದೆ ಬನ್ನಿರಿ.

1) **ನಮಗಾಗಿ ನಿಮ್ಮ ಪ್ರಾರ್ಥನೆ ಸಮಯವನ್ನು ಹೆಚ್ಚಿಸಿರಿ** ಮತ್ತು ಎಲ್ಲಾ ದೇವರ ಸೇವಕರುಗಳಿಗಾಗಿ ಮತ್ತು ಭಾರತದ ಎಲ್ಲಾ ಸಭೆಗಳಿಗಾಗಿ ಮತ್ತು ನೆರೆ ರಾಷ್ಟ್ರಗಳಿಗಾಗಿ, ಪಂಗಡದ ವ್ಯತ್ಯಾಸಗಳನ್ನು ಲೆಕ್ಕಿಸದೆ.

2) ಆತನ **ಕರೆಯ ಪ್ರತಿಧ್ವನಿ**ಯ ಸೇವೆಯ ಸಭಾ ಪಾಲಕರುಗಳಾಗಿ, ಸುವಾರ್ತಿಕರಿಗಳಿಗಾಗಿ, ವಾದ್ಯ ವೃಂದದವರಾಗಿ, **ಸಂತ ಪೌಲ ಮೇಟ್ರಿಕೇಲ್ಯುಷನ್** ಶಿಕ್ಷಕರುಗಳಾಗಿ, ನೆಹಮೀಯ ಸತ್ಯವೇದ ಕಾಲೇಜ್‌ನಲ್ಲಿ ಶಿಕ್ಷಕಗರುಗಳಾಗಿ, ಆಡಳಿತ ಕಛೇರಿ ಸಿಬ್ಬಂದಿಗಳಾಗಿ, ಮೇಲ್ವಿಚಾರಿಕರುಗಳಾಗಿ, ವೈಯಕ್ತಿಕ ತಂತ್ರಜ್ಞಾನ ಮುಂತಾದವುಗಳಲ್ಲಿ ನೀವು ದೇವರ ಸೇವೆ ಮಾಡಬಹುದು.

3) ಕರ್ತನು ನಿಮ್ಮ ನಡೆಸಿದರೆ ನಿಮ್ಮ ಹಣಕಾಸಿನ ಸಹಾಯವನ್ನು ಹೆಚ್ಚಿಸಿರಿ. ನಮ್ಮ ಕೆಲಸಗಾರರ ಮೂಲ ಅಗತ್ಯತೆಗಳ ಬೇಡಿಕೆಯು ಹೆಚ್ಚಾಗುತ್ತದೆ, ಮುದ್ರಣಾಲಯದ ಹಾಳೆಯ ಬೆಲೆ, ಮುದ್ರಣಾಲಯದ ಮಸಿ, ಅಂಚೆ, ಕಟ್ಟಡಗಳ ಬಾಡಿಗೆಗಳು, ನಿರ್ವಹಣೆ ಮುಂತಾದವುಗಳ ಬಹಳಷ್ಟು ಹೆಚ್ಚಳವಾಗಿದೆ.

## ಪ್ರದೇಶದ ಸಭೆಗಳು

ಕೋವಿಡ್-19 ನಂತರ ಭಾನುವಾರದ ಆರಾಧನೆಗಳ ಸಭಿಕರ ಕಡಿಮೆ ಹಾಜರಾತಿಯನ್ನು ಜಯಿಸಲು, ಪ್ರತಿ ಶುಕ್ರವಾರ ಸಂಜೆ 6 ರಿಂದ 7:30 ರ ವರೆಗೆ ನಾವು



ಪ್ರದೇಶದ ಸಭೆಗಳ ಸದಸ್ಯರ ಸಭೆಯನ್ನು ಆಯೋಜಿಸಿದ್ದೇವೆ. ನಾವು ಅವರನ್ನು ಭೇಟಿಯಾಗುತ್ತೇವೆ ಮತ್ತು ನಮ್ಮ ಕ್ಷೇತ್ರದ ನಾಯಕರ ಸಹಾಯದಿಂದ ಪ್ರತ್ಯೇಕವಾಗಿ ಪ್ರಾರ್ಥಿಸುತ್ತೇವೆ. ಅವರನ್ನು ನಾವು ಕುಟುಂಬವಾಗಿ ಆಹ್ವಾನಿಸುತ್ತೇವೆ ಮತ್ತು ಅವರ ಸಮಸ್ಯೆಗಳನ್ನು ಹಂಚಿಕೊಳ್ಳಲು ಅಪ್ಪಣೆ ಕೊಡುತ್ತೇವೆ ಮತ್ತು ಅವರಿಗೆ ಪ್ರೋತ್ಸಾಹ ಮಾಡುತ್ತೇವೆ. ಈಗ ನಮ್ಮ ಸಭೆಯ ಸದಸ್ಯರ ಹಾಜರಾತಿ ಹೆಚ್ಚುತ್ತಿರುವ ಕಾರಣ ಈ ಪ್ರಯತ್ನವು ಹೆಚ್ಚು ಯಶಸ್ವಿಯಾಗಿದೆ. ಕರ್ತನಾದ ಯೇಸು ಕ್ರಿಸ್ತ ಪರಿಶುದ್ಧ ನಾಮಕ್ಕೆ ಸ್ತೋತ್ರ ವುಂಟಾಗಲಿ.

ದೇವರ ಕೃಪೆ ಯಿಂದ, ಕೋವಿಡ್ -19ನಿಂದ ಪರಿಣಾಮ ಹೊಂದಿದವರಿಗೆ ಕಳೆದ ವರ್ಷಗಳಲ್ಲಿ ಚಿಕ್ಕದಾಗಿ ಬಡ ಜನರಿಗೆ ಸಹಾಯ ಮಾಡುವಂತೆ ಆತನು ನಮಗೆ ಸಹಾಯ ಮಾಡಿದನು. ಯಾವುದೇ ಜಾತಿ, ಧರ್ಮವಿಲ್ಲದೆ. ಕೋವಿಡ್-19 ನಂತರದ ಮತ್ತು ಇತರ ಕಾಯಿಲೆಗಳ ಕೆಟ್ಟ ಪರಿಣಾಮಗಳಿಂದ ಈಗಲೂ ಸಾಮಾನ್ಯ ಜನರು ಬಳಲುತ್ತಿದ್ದಾರೆ. ವೈದ್ಯಕೀಯ ಮತ್ತು ಶೈಕ್ಷಣಿಕ ಅಗತ್ಯಗಳಿಗಾಗಿ ಬಡವರು ಮತ್ತು ದೀನ ದಲಿತರಿಗೆ ಸಹಾಯ ಮಾಡಲು ನಮಗೆ ಸ್ವಲ್ಪ ನಿಧಿಯ ಅಗತ್ಯವಿದೆ. ಅಂತಹ ಅಗತ್ಯಗಳನ್ನು ಪೂರೈಸಲು ನಿಮ್ಮಂತಹ ಕೆಲವು ಜನರನ್ನು ಹೆಬ್ಬಿಸಲು ನಾವು ದೇವರನ್ನು ಪ್ರಾರ್ಥಿಸುತ್ತೇವೆ. ದೇವರು ನಿಮ್ಮನ್ನು ಪ್ರೇರೇಪಿಸಿದರೆ ಈ ಸಾಮಾನ್ಯ ಅಗತ್ಯತೆಗೆ ನೀವು ಪಾಲುದಾರರಾಗಿ, ಆತನ **ಕರೆಯ ಪ್ರತಿಧ್ವನಿ**ಯ ಸೇವೆಯ ಉದ್ದೇಶಕ್ಕಾಗಿ ನೀವು ಚೆಕ್, ಡಿಮ್ಯಾಂಡ್ ಡ್ರಾಫ್‌ನ್ನು ಕಳುಹಿಸಬಹುದು. (ಭಾರತೀಯ ದಾನಿಗಳಿಗೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 80ಜಿ ಅಡಿಯಲ್ಲಿ ನಾವು ನಿಮಗೆ ತೆರಿಗೆ ವಿನಾಯತಿ ರಸೀದಿಯನ್ನು ನೀಡುತ್ತೇವೆ). ಆತನ **ಕರೆಯ ಪ್ರತಿಧ್ವನಿ** ಸಂಸ್ಥೆಯು ಸರ್ಕಾರಿ ಮಾನ್ಯತೆ ಪಡೆದ ದಾನಿಯ ಸಂಸ್ಥೆಯಾಗಿದೆ.

ನಾವು ನಿಮಗಾಗಿ ಹಾಗು ನಿಮ್ಮ ಅಗತ್ಯಗಳಿಗಾಗಿ ಪ್ರಾರ್ಥಿಸುತ್ತೇವೆ. ದೇವರು ನಿಮ್ಮನ್ನು ಹೆಚ್ಚು ಹೆಚ್ಚು ಆಶೀರ್ವದಿಸುತ್ತಾನೆ ಮತ್ತು 2023 ರ ಹೊಸ ವರ್ಷದಲ್ಲಿ ಹೊಸ ಶಕ್ತಿ, ಬುದ್ಧಿವಂತಿಕೆ ಮತ್ತು ದೀರ್ಘಾಯುಷ್ಯದೊಂದಿಗೆ ಮುನ್ನಡೆಯಲು ನಿಮಗೆ ಅನುವು ಮಾಡಿ ಕೊಡುತ್ತಾನೆ.

**ಯೆಹೋವನು ನಿಮ್ಮನ್ನು ಆಶೀರ್ವದಿಸಿ ಕಾಪಾಡಲಿ; ಯೆಹೋವನು ಪ್ರಸನ್ನ ಮುಖದಿಂದ ನಿಮ್ಮನ್ನು ನೋಡಿ ನಿಮ್ಮ ಮೇಲೆ ದಯವಿಡಲಿ; ಯೆಹೋವನು ನಿಮ್ಮ ಮೇಲೆ ಕೃಪಾಕಟಾಕ್ಷವಿಟ್ಟು ಶಾಂತಿಯನ್ನು ಅನುಗ್ರಹಿಸಲಿ.**
ಅರಣ್ಯಕಾಂಡ 6:24-26



ದೇವರು ನಿಮ್ಮನ್ನು ಆಶೀರ್ವದಿಸಲಿ.

**ಕ್ರಿಸ್ತ ಯೇಸುವಿನಲ್ಲಿ ನಿಮ್ಮ ಸೇವಕರುಗಳು,**

**ಪಾ. ಎಸ್ ಸ್ಯಾಮ್ ಸೆಲ್ವರಾಜ್ ಮತ್ತು ಅಲೆಕ್ಷೆ ಸ್ಯಾಮಸನ್ ಸ್ಯಾಮ್**

(+91) 98412 71858 / 98410 71858, E.mail : samselvaraj333@gmail.com

*(1ನೇ ಪುಟದಿಂದ)*

**ಪವಿತ್ರಾತ್ಮದಿಂದಲೇ ಆದದ್ದು. ಆಕೆಯು ಒಬ್ಬ ಮಗನನ್ನು ಹಡೆಯುವಳು; ನೀನು ಆತನಿಗೆ ಯೇಸು ಎಂದು ಹೆಸರಿಡಬೇಕು; ಯಾಕೆಂದರೆ ಆತನೇ ತನ್ನ ಜನರನ್ನು ಅವರ ಪಾಪಗಳಿಂದ ಬಿಡಿಸಿ ಕಾಯುವವನು ಅಂದನು. ಕರ್ತನು ಪ್ರವಾದಿಯ ಮುಖಾಂತರ ಹೇಳಿದ ಮಾತು ನೇರವೇರುವಂತೆ ಇದೆಲ್ಲಾ ನಡೆಯಿತು; ಆ ಮಾತು ಏನಂದರೆ – ಇಗೋ, ಒಬ್ಬ ಕನ್ನಿಕೆಯು ಗರ್ಭಿಣಿಯಾಗಿ ಮಗನನ್ನು ಹಡೆಯುವಳು; ಆತನಿಗೆ ಇಮ್ಮಾನುವೇಲ್ ಎಂದು ಹೆಸರಿಡುವರು ಎಂಬದು. ದೇವರು ನಮ್ಮ ಕೂಡ ಇದ್ದಾನೆಂದು ಈ ಹೆಸರಿನ ಅರ್ಥ. ಆಗ ಯೋಸೇಫನು ನಿದ್ದೆ ತಿಳಿದಿದ್ದು ಕರ್ತನ ದೂತನು ಅಪ್ಪಣೆ ಕೊಟ್ಟ ಹಾಗೆ ತನ್ನ ಹೆಂಡತಿಯನ್ನು ಸೇರಿಸಿಕೊಂಡನು** (ಮತ್ತಾಯ 1:18-24).

ನಾವು ಯೋಸೇಫನಿಂದ ಪ್ರಾರಂಭಿಸೋಣ, ಕ್ರಿಸ್ತ ಜಯಂತಿಯ ಕಥೆಯಲ್ಲಿ ಯೋಸೇಫ ಅತ್ಯಂತ ಕಡಿಮೆ ಅಂದಾಜು ಮಾಡಲ್ಪಟ್ಟ ಮತ್ತು ಸಾಮಾನ್ಯವಾಗಿ ಕಡೆಗಣಿಸಲ್ಪಟ್ಟ ಪಾತ್ರವಾಗಿದೆ. ಆತನ ಪಾತ್ರವನ್ನು ಬೆಂಬಲಿಸುತ್ತಿದ್ದಾರೆ. ಆತನ ಬಗ್ಗೆ ನಮಗೆ ಸಂಪೂರ್ಣವಾಗಿ ತಿಳಿದಿಲ್ಲ. ಆದರೆ ಯೇಸೇಫನು ಒಬ್ಬ ಸಾಮನ್ಯ ಮನುಷ್ಯನಾಗಿದ್ದನು. ಆತನು ಯೌವ್ವನಸ್ಥ ಮತ್ತು ಬಡವನಾಗಿದ್ದನು. ಆತನ ಹತ್ತಿರ ಹಣವಿರಲಿಲ್ಲ.

ಆತನು ಬಹುಷ್ಯ ಒಂದು ಸಣ್ಣ ಹಳ್ಳಿಯಲ್ಲಿ ಒಂದು ಕೂಲಿ ಕೆಲಸ ಮಾಡು ತ್ತಿರಬಹುದು ಮತ್ತು ಇದನ್ನು ಹೊರತುಪಡಿಸಿ ನಾವು ಆತನ ಬಗ್ಗೆ ತಿಳಿದಿರುವುದು ಅಷ್ಟೇ, ಆತನು ನಿಶ್ಚಿತಾರ್ಥ ಮಾಡಿಕೊಂಡಿದ್ದನು. ಮರಿಯಳು ಯೋಸೇಫ ನೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡ ನಂತರ ಅಕೆಯು ಪವಿತ್ರಾತ್ಮದ ಮಗುವಿನೊಂದಿಗೆ ಕಂಡು ಬಂದಳು.

ಸ್ನೇಹಿತರೇ, ಇದು ನಿಮಗೆ ಸಂಭವಿಸಿದರೆ ನೀವು ನಂಬುತ್ತೀರಾ? ಇದುವರೆಗೆ ನೀಡಿದ ಅತ್ಯಂತ ಅವಿವೇಕದ, ಅತಿರೇಕದ ತರ್ಕಬದ್ಧವಲ್ಲದ ಕಥೆ. ಆದರೆ ಇದು ಸತ್ಯವಾಗಿದೆ. ಈಗ ಯೋಸೇಫನ ಪರೀಕ್ಷೆಯಾಗಿದೆ ಮತ್ತು ಸತ್ಯವೇದವು ಹೇಳುತ್ತದೆ ಯೋಸೇಫನು ಸಜ್ಜನನು ಮತ್ತು ಆತನ ಹೆಂಡತಿಯನ್ನು ಬೈಲಿಗೆ ತರುವುದಕ್ಕೆ ಮನಸ್ಸಿರಲಿಲ್ಲ. ಆತನು ಕಥೆಯಲ್ಲಿ ನಂಬಿಕೆ ಇಡಲಿಲ್ಲ, ಆದರೆ ಸತ್ಯವೇದವು ಹೀಗೆ ಹೇಳುತ್ತದೆ. ಅಧ್ಯಾಯ 1ರಲ್ಲಿ, ಯೇಸೇಫನು ಸಜ್ಜನನಾಗಿದ್ದನು ಮತ್ತು ಮರಿಯಳನ್ನು ಬೈಲಿಗೆ ತರುವುದಕ್ಕೆ ಮನಸ್ಸಿರಲಿಲ್ಲ. ಆತನು ಗುಪ್ತವಾಗಿ ಬಿಟ್ಟು ಬಿಡಬೇಕು ಅಂದಕೊಂಡನು. **ಆದರೆ ಆಕೆಯ ಗಂಡನಾದ ಯೋಸೇಫನು ಸಜ್ಜನನಾಗಿದ್ದು ಆಕೆಯನ್ನು ಬೈಲಿಗೆ ತರುವುದಕ್ಕೆ ಮನಸ್ಸಿಲ್ಲದೆ, ಯಾರಿಗೂ ತಿಳಿಯದಂತೆ ಆಕೆಯನ್ನು ಬಿಟ್ಟು ಬಿಡಬೇಕೆಂದಿದ್ದನು** (ಮತ್ತಾಯ 1:19). ಆ ಒಂದು ದಿನಗಳಲ್ಲಿ ನಿಶ್ಚಿಯ ಕಾರ್ಯವು ಮದುವೆಯ ಹಾಗೆ ಇತ್ತು. ಅದು ಒಂದು ಒಪ್ಪಂದದ ಒಡಂಬಡಿಕೆಯಾಗಿತ್ತು. ನೀವು ಸುಮ್ಮನೆ ನಿಶ್ಚಯ ಕಾರ್ಯವನ್ನು ಮುರಿಯುವುದಕ್ಕೆ ಆಗುವುದಿಲ್ಲ. ಆದುದರಿಂದ ಗುಪ್ತವಾಗಿ ಬಿಟ್ಟು ಬಿಡಬೇಕೆಂದಿದ್ದನು. ಆದರೆ ಕನಸಿನಲ್ಲಿ ದೂತನು ಅವನಿಗೆ ಕಾಣಿಸಿಕೊಂಡನು. ಯೋಸೇಫನು ಎದ್ದು ಕರ್ತನ ದೂತನ ಆಜ್ಞೆಯ ಮೇರೆಗೆ ಹಾಗೆಯೇ ಮಾಡಿದನು ಮತ್ತು ಮರಿಯಳನ್ನು ತನ್ನ ಹೆಂಡತಿಯನ್ನಾಗಿ ತನ್ನ ಮನೆಗೆ ಸ್ವೀಕರಿಸಿಕೊಂಡನು. **ಆಗ ಯೋಸೇಫನು ನಿದ್ದೆ ತಿಳಿದೆದ್ದು ಕರ್ತನ ದೂತನು ಅಪ್ಪಣೆ ಕೊಟ್ಟ ಹಾಗೆ ತನ್ನ ಹೆಂಡತಿಯನ್ನು ಸೇರಿಸಿಕೊಂಡನು.** ಮತ್ತಾಯ 1:24. ಅಸಾಧ್ಯವಾದದನ್ನು ನಂಬುವುದಕ್ಕೆ ಆತನು ದೊಡ್ಡ ನಂಬಿಕೆಯನ್ನು ತೆಗೆದುಕೊಂಡನು. ಅಸಂಭವ ಕಥೆ ಮತ್ತು ದೇವರು ತನ್ನ ಜೀವನಕ್ಕಾಗಿ ತಾನು ಊಹಿಸಿರುವುದಕ್ಕಿಂತ ದೊಡ್ಡ ಮತ್ತು ಉತ್ತಮವಾದ ಯೋಜನೆಯನ್ನು ಹೊಂದಿದ್ದಾನೆ ಎಂದು ನಂಬಲು.

ಇಲ್ಲಿ ನಾವು ಮೊದಲ ಅಂಶವನ್ನು ಗಮನಿಸಬೇಕು. ನೀವು ದೇವರಿಂದ ಆಶೀರ್ವದಿಸಬೇಕಾದರೆ, ನಿಮ್ಮ ವ್ಯಾಪಾರದಲ್ಲಿ ಆತನ ಆಶೀರ್ವಾದವು ಬೇಕಾದರೆ, ನಿಮ್ಮ ಮದುವೆಯಲ್ಲಿ, ನಿಮ್ಮ ಸಂಬಂಧಗಳಲ್ಲಿ, ನಿಮ್ಮ ಹಣಕಾಸಿನಲ್ಲಿ, ನೀವು ಯೋಸೇಫನು ಮಾಡಿದ ಹಾಗೆ ಮಾಡಲೇಬೇಕು ಮತ್ತು ನಿಮ್ಮ ಜೀವನಕ್ಕಾಗಿ ದೇವರ ಯೋಜನೆಯೊಂದಿಗೆ ಸಹಕರಿಸಬೇಕು ಮತ್ತು ನಿಮ್ಮ ಜೀವನಕ್ಕಾಗಿ ನಿಮ್ಮ ಯೋಜನೆ ಯನ್ನು ಅನುಸರಿಸುವುದನ್ನು ನಿಲ್ಲಿಸಬೇಕು. ಇದು ಯೋಸೇಫ ಜೀವನದಲ್ಲಿ ಒಟ್ಟು ಯು ಟರ್ನ್ ಆಗಿದೆ. ಅವನು ತನ್ನ ಜೀವನವನ್ನು ಮರಿಯ ಳೊಂದಿಗೆ ಯೋಜಿಸಿದ್ದನು. ಆದರೆ ದೇವರ ಯೋಜನೆಯು ದೊಡ್ಡದಾಗಿದೆ ಮತ್ತು ಉತ್ತಮವಾಗಿದೆ. ನಿಮ್ಮ ಜೀವನಕ್ಕಾಗಿ ದೇವರ ಯೋಜನೆಯೊಂದಿಗೆ ಸಹಕರಿಸಿರಿ. ಅದು ಅರ್ಥವಾಗದಿದ್ದರೂ ಸಹ, ನಂತರ ಅರ್ಥವಾಗುತ್ತದೆ.

ಪ್ರಿಯ ಸ್ನೇಹಿತರೇ, ದೇವರ ದೊಡ್ಡದಾದ ಯೋಜನೆಯಾಗಿದೆ. **ಸತ್ಯವೇದ ಹೇಳುತ್ತದೆ, ನಾನು ನಿಮ್ಮ ವಿಷಯದಲ್ಲಿ ಮಾಡಿಕೊಳ್ಳುತ್ತಿರುವ ಆಲೋಚನೆಗಳನ್ನು ನಾನೇ ಬಲ್ಲೆನು; ಅವು ಅಹಿತದ ಯೋಚನೆಗಳಲ್ಲ, ಹಿತದ ಯೋಚನೆಗಳೇ.** ಯೆರಮೀಯ 29:11. ನಾನು ಏನು ಮಾಡುತ್ತಾನೆ ನನಗೆ ಗೊತ್ತು ಎಂದು ದೇವರು ಹೇಳುತ್ತಾನೆ. ನನಗೆ ಎಲ್ಲಾ ಯೋಜನೆಗಳು ಇವೆ. ನಿಮ್ಮ ಕಾಳಜಿಯ ಬಗ್ಗೆ ಯೋಜನೆಗಳು. ನಿಮ್ಮನ್ನು ನೋಯಿಸುವುದಕ್ಕೆ ಅಲ್ಲ. ನಮ್ಮ ದೇವರು ಒಳ್ಳೆಯ ದೇವರು. ನನ್ನ ಯೋಜನೆಗಳು ನೀವು ನಿರೀಕ್ಷಿಸುವ ಭವಿಷ್ಯವನ್ನು ನಿಮಗೆ ನೀಡುತ್ತದೆ. ನೀವು ದೇವರನ್ನು ನಂಬುತ್ತೀರಾ? ಅಥವಾ ನಿಮ್ಮ ನಂಬುತ್ತಿರಾ? ನಿಮ್ಮ ಜೀವಿತದಲ್ಲಿ ದೇವರ ಆಶೀರ್ವಾದಗಳು ಬೇಕಾದರೆ, ನಿಮ್ಮ ಜೀವಿತಕ್ಕೆ ದೇವರ ಯೋಜನೆ ಯೊಂದಿಗೆ ನೀವು ಸಹಕರಿಸಬೇಕು. ಈ ಒಂದು ಕಾರಣದಿಂದ ಯೋಸೆಫ್ ಮೊದಲ ಕ್ರಿಸ್ತ ಜಯಂತಿ ಯಲ್ಲಿ ಇದ್ದನು. ಯೋಸೇಫನ ಹಾಗೆ ನಮ್ಮ ಜೀವಿತಕ್ಕೆ ದೇವರ ಯೋಜನೆಯೊಂದಿಗೆ ಸಹಕರಿಸಬೇಕು.

*(6ನೇ ಪುಟಕ್ಕೆ)*


# NEHEMIAH BIBLE

**RESIDENTIAL / EVENING COLLEGE,**

Velachery / Chepauk & Santhoshapuram, Chennai.

Medium : Hindi / Tamil

*Registered Candidate for Membership*

Asia Theological Association (ATA)

Recognised by International Christian Leaders & Senior Pastors for the past 53 years

**Certificate in Theology : One year**

**Diploma in Theology : Two years**

Qualification : 10th Standard & above

**Rush for Admission!**

**Contact : The Chairman, Nehemiah Bible College.**

10, MOHAMMED ABDULLAH 2ND STREET, CHEPAUK, CHENNAI - 600 005, INDIA.

Phone : (+91-44) 2852 8282, Cell : (+91) 98410 71852 / 95661 31858

E.mail : sam@echoofhiscall.org / Website : www.echoofhiscall.org

✶ ONLINE CLASSES ARE AVAILABLE ✶

GREAT COMMISSION PARTNERS
ECHO OF HIS CALL MINISTRIES
SINCE 1969

# ಪರಮಾದೇಶದಲ್ಲಿ ಪಾಲುಗಾರರು



ಹಂಚುವುದು (ಗಲಾತ್ಯ.6:2), ಪ್ರೋತ್ಸಾಹಿಸುವುದು (ರೋಮಾಪುರ.12:13 )
ತ್ವರಿತಗೊಳಿಸುವುದು ( II ತಿಮೋಥಿ. 1:6 )

**19 ಡಿಸೆಂಬರ್ 2022 ರಿಂದ 18 ಜನವರಿ 2023 ರ ವರೆಗೆ**

**(ಈ ಹಾಳೆಯನ್ನು ಹರಿದು ನಿಮ್ಮ ಸತ್ಯವೇದದೊಳಗಿಟ್ಟು ಇವುಗಳಿಗಾಗಿ ಪ್ರಾರ್ಥಿಸಿರಿ)**

## ಸ್ತೋತ್ರಕ್ಕಾಗಿ ಅಂಶಗಳು

| | |
|---|---|
| ಡಿಸೆಂಬರ್ 19 | - ನಮ್ಮ **ಸುವಾರ್ತ ಮುದ್ರಣಾಲಯವು** ಮತ್ತು ಸಮರ್ಥ ಕೆಲಸಗಾರ ರಿಂದ ನಿರಂತರವಾಗಿ ನಡೆಯುತ್ತಾ ಇದೆ. |
| ಡಿಸೆಂಬರ್ 20 | - ನಮ್ಮ ಹಿರಿಯ ಸಭಾ ಪಾಲಕರನ್ನು ಸಂರಕ್ಷಿಸಿದ್ದಕ್ಕಾಗಿ ಮತ್ತು ಅವರ ಕುಟುಂಬದವರನ್ನು ಎಲ್ಲಾ ಕೆಟ್ಟ ಸಂಗತಿಗಳಿಂದ ರಕ್ಷಿಸಿದ್ದಕ್ಕಾಗಿ. |
| ಡಿಸೆಂಬರ್ 21 | - ನಮ್ಮ ಎಲ್ಲಾ ಸಹ ಸಂಪಾದಕರು ಮತ್ತು ಅವರು ಕುಟುಂಬ ಗಳಿಗಾಗಿ. |
| ಡಿಸೆಂಬರ್ 22 | - ದೇವರ ಕೃಪೆಯಿಂದ ನಾವು ತಲುಪದೇ ಇರುವ ಸ್ಥಳಗಳಿಗೆ ಸುವಾರ್ತೆಯಿಂದ ತಲುಪುವಂತೆ ಸಹಾಯ ಮಾಡಿದಕ್ಕಾಗಿ. |
| ಡಿಸೆಂಬರ್ 23 | - ನಮ್ಮ **ಸಂತ ಪೌಲ ಮೇಟ್ರಿಕ್ಯುಲೇಷನ್ ಶಾಲೆ, ನೆಹಮೀಯ ಸತ್ಯವೇದ ಕಾಲೇಜು ಮತ್ತು ದೈವಶಾಸ್ತ್ರ ಅಂಚೆ ಕೋರ್ಸ್‌ಗಳು** ಅಗತ್ಯವಿರುವ ಜನಗಳಿಗೆ ಸಹಾಯ ಮಾಡುತ್ತಾ ಇರುವುದಕ್ಕಾಗಿ. |
| ಡಿಸೆಂಬರ್ 24 | - ನಮ್ಮ ಸಹ ಸಂಪಾದಕರು, ರಾಜ್ಯ ಸಂಯೋಜಕರು ಮತ್ತು ಅವರ ಕುಟುಂಬಗಳಿಗಾಗಿ. |
| ಡಿಸೆಂಬರ್ 25 | - ಲೋಕದ ರಕ್ಷಕನು, ಎಲ್ಲಾರನ್ನು ರಕ್ಷಿಸುವುದಕ್ಕಾಗಿ ಯೇಸು ಕ್ರಿಸ್ತನು ಜನಿಸಿದನು. |
| ಡಿಸೆಂಬರ್ 26 | - ಕರೋನ್ ವೈರಸ್ ಸೋಂಕು ಕಡಿಮೆಯಾಗಿದ್ದಕ್ಕಾಗಿ. |
| ಡಿಸೆಂಬರ್ 27 | - ನಮ್ಮ ಎಲ್ಲಾ ಕೆಲಸಗಾರರ ಮೇಲ ಆತನು ಆಶೀರ್ವಾದ ಗಳನ್ನು ಸುರಿಸಿರುವುದಕ್ಕಾಗಿ. |
| ಡಿಸೆಂಬರ್ 28 | - ಸೇವಾ ಕ್ಷೇತ್ರದ ಸೇವಕರುಗಳ ದೊಡ್ಡ ಸಮರ್ಪಣೆಗಾಗಿ. |
| ಡಿಸೆಂಬರ್ 29 | - ಇಡೀ ವರ್ಷದಲ್ಲಿಯೇ ಎಲ್ಲಾ ಕ್ರೈಸ್ತ ಸಂಘ ಸಂಸ್ಥೆಗಳು ನಯವಾಗಿ ನಡೆಸಿದ್ದಕ್ಕಾಗಿ. |
| ಡಿಸೆಂಬರ್ 30 | - ಕಳೆದ ವರ್ಷವೆಲ್ಲಾ ಎಲ್ಲಾ ದೈವ ಸೇವಕರಗಳನ್ನು ಆಶೀರ್ವದಿಸಿ ಸಂರಕ್ಷಣೆ ಮಾಡಿರುವುದಕ್ಕಾಗಿ. |
| ಡಿಸೆಂಬರ್ 31 | - 2022 ರಲ್ಲಿ ನಮ್ಮ ಎಲ್ಲಾ ಅಗತ್ಯತೆಗಳನ್ನು ಅದ್ಭುತವಾಗಿ ಪೂರೈಸಿದ್ದಕ್ಕಾಗಿ. |
| ಜನವರಿ 01 | - ಎಲ್ಲಾ ಓದುಗರು ಮತ್ತು ಪ್ರಪಂಚದ ಎಲ್ಲಾ ಜನರಿಗೆ 2022 ರಲ್ಲಿ ಶಾಂತಿ ದೊರೆತಿದ್ದಕ್ಕಾಗಿ ಮತ್ತು 2023 ರಂದು ಪ್ರವೇಶ ಮಾಡಿದ್ದು. |
| ಜನವರಿ 02 | - ದೇವರು ನಮ್ಮ ಮುಖ್ಯ ಸಭೆಗೆ ಮತ್ತು ಶಾಖಾ ಸಭೆಗಳಿಗೆ ಹೆಚ್ಚು ವಿಶ್ವಾಸಿಗಳನ್ನು ಕೊಟ್ಟದ್ದಕ್ಕಾಗಿ. |
| ಜನವರಿ 03 | - ಎಲ್ಲಾ ಸಭೆಗಳ ಆಶೀರ್ವಾದಕ್ಕಾಗಿ ಮತ್ತು 2023 ರಲ್ಲಿ ಒಳ್ಳೆಯ ವಾಗ್ದಾನಗಳಿಗಾಗಿ. |

## ಪ್ರಾರ್ಥನೆಗಾಗಿ ಅಂಶಗಳು

| | |
|---|---|
| ಜನವರಿ 04 | - ಆತನ **ಕರೆಯ ಪ್ರತಿಧ್ವನಿ**ಯ ಸೇವೆಯ **ಮಾಧ್ಯಮ ವಿಡಿಯೋ** ಸೇವೆಗಾಗಿ ಕ್ಯಾಮರಾ. |
| ಜನವರಿ 05 | - ಮುಖ್ಯೋಪ್ಯಾಧ್ಯಾಯರು, ಶಿಕ್ಷಕರಿಗಳಿಗಾಗಿ, **ಸಂತ ಪೌಲನ ಶಾಲೆ**ಯ ವಿದ್ಯಾರ್ಥಿಗಳಿಗಾಗಿ ಹಾಗು ಸಿಬ್ಬಂದಿ ವರ್ಗದವರಿಗಾಗಿ, **ನೆಹಮೀಯ ಸತ್ಯವೇದ ಕಾಲೇಜು, ಸತ್ಯವೇದ ಅಂಚೆ ಕೋರ್ಸ್**ಗಳಿಗಾಗಿ. |
| ಜನವರಿ 06 | - ಪ್ರಪಂಚದ ಎಲ್ಲಾ ಕ್ರೈಸ್ತ ಶಿಕ್ಷಣ ಸಂಸ್ಥೆಗಳ ಉತ್ತಮ ಖ್ಯಾತಿಯನ್ನು ಉಳಿಸಿಕೊಳ್ಳುವುದು. |
| ಜನವರಿ 07 | - ಎಲ್ಲಾ ಕುಟುಂಬಗಳಲ್ಲಿ ಶಾಂತಿಯು ನೆಲೆಸುವಂತೆ. |
| ಜನವರಿ 08 | - ಪ್ರಪಂಚದ ಜನರು ಹೊಸ ರೋಗಗಳಿಂದ ತಡೆಗಟ್ಟಲು ಮತ್ತು ಉತ್ತಮ ಆರೋಗ್ಯವನ್ನು ಆನಂದಿಸಲು. |
| ಜನವರಿ 09 | - ಪ್ರಪಂಚದ ಎಲ್ಲಾ ವ್ಯಕ್ತಿಗಳ ವೈಯಕ್ತಿಕ ಅದಾಯವು ಬೆಳೆಯು ವಂತೆ. |
| ಜನವರಿ 10 | - ಎಲ್ಲಾ ಸಭೆಗಳಿಗೆ ದೈವಿಕ ಸಂರಕ್ಷಣೆ ಕೆಟ್ಟ ಕಾರ್ಯಗಳ ವಿರೋಧವಾಗಿ. |
| ಜನವರಿ 11 | - ಪ್ರಪಂಚದ ಎಲ್ಲಾ ನಾಯಕರುಗಳು ದೈವತ್ವದ ಜ್ಞಾನದಿಂದ ತುಂಬುವಂತೆ ಮತ್ತು ಜನರ ಕಲ್ಯಾಣಕ್ಕಾಗಿ ಕೆಲಸ ಮಾಡುವಂತೆ. |
| ಜನವರಿ 12 | - ಎಲ್ಲಾ ಸಭೆಗಳು ಮತ್ತು ಸಂಘ ಸಂಸ್ಥೆಗಳು ಸರ್ಕಾರದೊಂದಿಗೆ ನ್ಯಾಯವಾಗಿ ನೊಂದಾಯಿಸುವಂತೆ. |
| ಜನವರಿ 13 | - ಯುವಕರಲ್ಲಿ ಹಿಂಸೆ ಮತ್ತು ಕೊಲೆಯ ದುಷ್ಟ ಶಕ್ತಿಗಳನ್ನು ತೊಡೆದು ಹಾಕಲು ಮತ್ತು ಪವಿತ್ರಾತ್ಮದಿಂದ ತುಂಬಲು. |
| ಜನವರಿ 14 | - ರಾಷ್ಟ್ರಗಳೊಂದಿಗೆ ಶಾಂತಿ ಮತ್ತು ಆರ್ಥಿಕ ಬೆಳವಣಿಗೆಗಾಗಿ. |
| ಜನವರಿ 15 | - ಆತನ **ಕರೆಯ ಪ್ರತಿಧ್ವನಿ**ಯ ವಿವಿಧ ಸೇವೆಗಳ ಆಶೀರ್ವಾದಕ್ಕಾಗಿ. |
| ಜನವರಿ 16 | - ಕ್ರೈಸ್ತರು ದೇವರ ವಾಕ್ಯಗಳನ್ನು ಅನುಸರಿಸುವಂತೆ ಮತ್ತು ಕ್ರಿಸ್ತನ ಹಾಗೆ ಮನಸ್ಸನ್ನು ಹೊಂದುವಂತೆ. |
| ಜನವರಿ 17 | - ಪಾಸ್ಟರ್ ಸ್ಯಾಮ್ ಸೆಲ್ವರಾಜ್ ಮತ್ತು ಅವರ ಕುಟುಂಬದ ಮೇಲೆ 2023 ರಲ್ಲಿ ಕೂಡ ದೇವರ ಬಲವುಳ್ಳ ಹಸ್ತವಿರುವಂತೆ. |
| ಜನವರಿ 18 | - ನಮ್ಮ ಪ್ರಾರ್ಥನೆ ಸಹಭಾಗಿಗಳಿಗಾಗಿ, ಚಂದಾದರರ ಸಹಭಾಗಿ ಗಳಿಗಾಗಿ, ನಂಬಿಕೆಯ ಸಹಭಾಗಿಗಳಿಗಾಗಿ, ಜೀವಂತ ಸಹಭಾಗಿ ಗಳಿಗಾಗಿ ಮತ್ತು ದೊಡ್ಡ ಆಜ್ಞೆಯ ಸಹಭಾಗಿಗಳಿಗಾಗಿ ಮತ್ತು ಅವರ ಕುಟುಂಬಗಳ ಮೇಲೆ. |

(4 ನೇ ಪುಟದಿಂದ)

## 2. ಕುರುಬರು ಆಚರಿಸಿದರು !

**ಆ ದೂತನು ಅವರಿಗೆ – ಹೆದರಬೇಡಿರಿ, ಕೇಳಿರಿ; ಜನರಿಗೆಲ್ಲಾ ಮಹಾ ಸಂತೋಷ ವನ್ನುಂಟು ಮಾಡುವ ಶುಭ ಸಮಾಚಾರವನ್ನು ನಿಮಗೆ ತಿಳಿಸುತ್ತೇನೆ. ಅದೇನಂದರೆ, ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ, ಆತನು ಕರ್ತನಾಗಿರುವ ಕ್ರಿಸ್ತನೇ.** ಲೂಕ 2:10-11.

ಸಮಾಜದಲ್ಲಿ ಕುರುಬರು ಕೀಳು ಮಟ್ಟದಲ್ಲಿ ಇರುವಂತರು. ರೋಮ್ ಸಾಮ್ರಾಜ್ಯದಲ್ಲಿ ಮತ್ತು ಹೊಸ ಒಡಂಬಡಿಕೆ ಸಮಯದಲ್ಲಿ ಅವರು ಕೀಳು ಜಾತಿಯವರು. ಅವರು ಕುರಿಗಳಂತೆ ಗಬ್ಬು ನಾರುತ್ತಿದ್ದರು, ಜಡೆ, ವಾಸನೆ ಮತ್ತು ಒದ್ದೆಯಾಗಿವೆ. ಕುರುಬರು ಒಬ್ಬರ ಹುಟ್ಟುಹಬ್ಬದ ಸಂತೋಷ ಕೂಟಕ್ಕೆ ಆಹ್ವಾನಿಸುವ ವಿಶಿಷ್ಟ ಅತಿಥಿಗಳಾಗಿರಲಿಲ್ಲ. ಯಾಕೆಂದರೆ ಅವರು ಸ್ಥಳವನ್ನು ವಾಸನೆ ಮಾಡುತ್ತಾರೆ. ಅವರು ಸಮಾಜದಲ್ಲಿ ಅತ್ಯಂತ ಕಡಿಮೆ ಗೌರವಾನ್ವಿತ ವ್ಯಕ್ತಿಗಳಾಗಿದ್ದರು. ಇನ್ನೂ ದೇವರು ಅತ್ಯುನ್ನತದಿಂದ ಕೆಳಕ್ಕೆ ಹೋದನು ಮತ್ತು ತನ್ನ ಮಗನ ಜನ್ಮದಲ್ಲಿ ಅವರನ್ನು ಆಹ್ವಾನಿಸಿದನು. ತೋಳಗಳು ಮತ್ತು ಇತರ ನರ ಭಕ್ಷಕಗಳಿಂದ ರಕ್ಷಿಸಲು ಅವರು ತಮ್ಮ ಕುರಿಗಳೊಂದಿಗೆ ಪ್ರತಿ ರಾತ್ರಿ ಹುಲ್ಲಿನ ಮೇಲೆ ಮಲಗುತ್ತಿದ್ದರು. ಸತ್ಯವೇದವು ಈ ರೀತಿಯಾಗಿ ಹೇಳುತ್ತದೆ. ಮಧ್ಯರಾತ್ರಿಯಲ್ಲಿ ದೇವದೂತರು ಕಾಣಿಸಲ್ಪಟ್ಟರು. ಇದ್ದಕ್ಕಿದ್ದಂತೆ ಆಕಾಶವು ಬೆಳಗುತ್ತದೆ ಮತ್ತು ದೇವದೂತನು ಕುರುಬರಿಗೆ, ಹೆದರಬೇಡಿರಿ, ಕೇಳಿರಿ; ಜನರಿಗೆಲ್ಲಾ ಮಹಾ ಸಂತೋಷವನ್ನುಂಟು ಮಾಡುವ ಶುಭ ಸಮಾಚಾರವನ್ನು ನಿಮಗೆ ತಿಳಿಸುತ್ತೇನೆ. ಪ್ರತೀ ಬಾರಿ ದೇವದೂತನು ಕಾಣಿಸಿಕೊಂಡಾಗ ಆತನು ಭಯ ಪಡಬೇಡ ಎಂದು ಪ್ರಾರಂಭಿಸಬೇಕು. ಯಾಕೆಂದರೆ ನೀವು ಒಬ್ಬರನ್ನು ನೋಡಿದರೆ ಅದು ನಿಮ್ಮನ್ನು ಸಾಯುವಂತೆ ಹೆದರಿಸುತ್ತದೆ. ಜನರಿಗೆಲ್ಲಾ ಮಹಾ ಸಂತೋಷವನ್ನುಂಟು ಮಾಡುವ ಶುಭ ಸಮಾಚಾರ. ಕ್ರಿಸ್ತ ಜಯಂತಿಯು ಕೇವಲ ಕ್ರೈಸ್ತರಿಗೆ ಮಾತ್ರವಲ್ಲ. ಇದು ಎಲ್ಲಾ ಜನರಿಗೆ.

ಯೇಸು ಕೇವಲ ಕೆಲವು ಜನರಿಗೋಸ್ಕರ ಸಾಯುವುದಕ್ಕೆ ಬರಲಿಲ್ಲ. ಆದರೆ ಎಲ್ಲರಿಗೋಸ್ಕರ. ಇದು ಎಲ್ಲಾ ಜನರಿಗೋಸ್ಕರ ಇರುವ ಶುಭ ಸಮಾಚಾರ. ಆತನು ಈ ರೀತಿಯಾಗಿ ಹೇಳುತ್ತಾನೆ. ಈ ಹೊತ್ತು ನಿಮಗೋಸ್ಕರ ದಾವೀದನೂರಲ್ಲಿ ಒಬ್ಬ ರಕ್ಷಕನು ಹುಟ್ಟಿದ್ದಾನೆ. **ನಿಮ್ಮ ಒಳಿತಿಗಾಗಿ ಮತ್ತು ಆತನು ಕರ್ತನಾಗಿರುವ ಕ್ರಿಸ್ತನು. ಕುರುಬರು ಬೇಗ ಬೆತ್ಲಹೇಮ್‌ಗೆ ಹೋದರು. ನಾವು ಈ ರೀತಿಯಾಗಿ ಓದುತ್ತೇವೆ. ತಟ್ಟನೆ ಹೋಗಿ ಮರಿಯಳನ್ನೂ ಯೋಸೇಫನನ್ನೂ ಗೋದಲಿ ಯಲ್ಲಿ ಮಲಗಿರುವ ಆ ಕೂಸನ್ನೂ ಕಂಡು ಕೊಂಡರು. ಅದನ್ನು ನೋಡಿದಾಗ ಅವರು ಆ ಮಗುವಿನ ವಿಷಯದಲ್ಲಿ ತಮಗೆ ಹೇಳಿದ ಮಾತನ್ನು ತಿಳಿಯಪಡಿಸಿದರು. ಅದನ್ನು ಕೇಳಿ ದವರೆಲ್ಲರೂ ತಮಗೆ ಕುರುಬರು ಹೇಳಿದ ಮಾತುಗಳಿಗೆ ಆಶ್ಚರ್ಯಪಟ್ಟರು.** ಲೂಕ 2:16-18.

ಕುರುಬರು ತಟ್ಟನೆ ಬೇತ್ಲೆಹೇಮಿಗೆ ಹೋಗಿ ಯೋಸೇಫ, ಮರಿಯಳು, ಮಗುವನ್ನು ಗೋದಲಿಯಲ್ಲಿ ಮಲಗಿರುವುದನ್ನು ನೋಡಿದರು. ಅವರು ನೋಡಿದ ಮೇಲೆ ಅವುಗಳಿಗೋಸ್ಕರ ದೇವರನ್ನು ಕೊಂಡಾಡುತ್ತಾ ಸ್ತುತಿಸುತ್ತಾ ಹಿಂತಿರುಗಿ ಹೋದರು. ಅವರು ಸಂಭ್ರಮ ಮಾಡುತ್ತಿದ್ದರು. ಅವರು ಸ್ತುತಿ ಆರಾಧನೆ ಮಾಡುತ್ತಿದ್ದರು. ಅವರು ನೋಡಿದ ಎಲ್ಲಾ ಸಂಗತಿಗಳಿಗಾಗಿ ದೇವರಿಗೆ ಕೃತಜ್ಞತೆಯನ್ನು ಸಲ್ಲಿಸಿದರು. ದೇವದೂತನು ಹೇಳಿದ ಸಂಗತಿಗಳನ್ನು ಕೇಳಿದರು. ಅವರು ಆಚರಿಸಿದರು. ಯೋಸೇಫನು ಸಹಕರಿಸಿದನು. ಆದರೆ ಕುರುಬರು ಆಚರಿಸಿದರು. ಕ್ರಿಸ್ತ ಜಯಂತಿಯು ಒಂದು ಹಬ್ಬ. ಅದು ಶವ ಸಂಸ್ಕಾರ ಅಲ್ಲ. ಅದಕ್ಕಾಗಿ ನಾವು ಸಂತೋಷದ ಕ್ರಿಸ್ತ ಜಯಂತಿ ಎಂದು ಹೇಳುತ್ತೇವೆ.

ಕ್ರಿಸ್ತನ ಜನನವು ಎಲ್ಲಾ ಜನರಿಗೆ ಬಹಳ ಸಂತೋಷದ ಸುವಾರ್ತೆಯಾಗಿದೆ. ಯಾಕೆಂದರೆ ಈ ದಿನ ದಾವೀದನ ನಗರದಲ್ಲಿ ಕ್ರಿಸ್ತ ಕರ್ತನಾದ ರಕ್ಷಕನು ನಿಮಗಾಗಿ ಜನಿಸಿದನು. ಇದು ಅತ್ಯುತ್ತಮ ಸಂದೇಶ. ನಿಮ್ಮ ಪಾಪಗಳು ಕ್ಷಮಿಸಲ್ಪಡುತ್ತವೆ. ನಿಮ್ಮ ಜೀವಿತಕ್ಕೆ ಒಂದು ಉದ್ದೇಶವಿದೆ. ಕ್ರಿಸ್ತ ಜಯಂತಿಯ ಕಾರಣದಿಂದ ನನಗೆ ಪರಲೋಕದಲ್ಲಿ ಸ್ಥಳವುಂಟು. ಇದು ಸಂತೋಷ ಸಂದರ್ಭ. ಇಲ್ಲಿ ನಾವು ಎರಡನೆಯ ಅಂಶವನ್ನು ನಾವು ಗಮನಿಸಬೇಕು. ನಿಮಗೆ ಆಶೀರ್ವಾದಬೇಕಾದರೆ. ನೀವು ಕುರುಬರ ಹಾಗೆ ಆಚರಿಸಬೇಕು. ಕಾರಣ ದೇವರು ನಮ್ಮ ಸಂಗಡ ಇದ್ದಾನೆ. ಕ್ರಿಸ್ತ ಜಯಂತಿ ಯಲ್ಲಿ, ಜನರು ಉಳಿದೆಲ್ಲವನ್ನೂ ಆಚರಿಸುವುದನ್ನು ನೋಡುವುದು ಭಯಾನಕವಾಗಿದೆ. ಎಲ್ಲಾ ಕ್ರಿಸ್ತ ಜಯಂತಿ ಸಭೆಗಳು ಇರುತ್ತವೆ ಮತ್ತು ಯೇಸುವನ್ನು ಎಂದಿಗೂ ಉಲ್ಲೇಖಿಸಲಾಗಿಲ್ಲ. ಆದರೆ ಈ ಆಚರಣೆಯ ಸಂಪೂರ್ಣ ಉದ್ದೇಶವು ದೇವರು ನಮ್ಮ ಸಂಗಡ ಇದ್ದಾನೆ. ಆತನು ಈ ಲೋಕಕ್ಕೆ ಬಂದನು. ಈ ಲೋಕದಲ್ಲಿ ನಾವು ಏಕಾಂಗಿಯಲ್ಲ. ನಮ್ಮ ಜೀವಿತಕ್ಕೆ ಆತನ ಯೋಜನೆ ಮತ್ತು ಉದ್ದೇಶವಾಗಿದೆ. ಆತನು ನಮ್ಮನ್ನು ಪ್ರೀತಿಸುತ್ತಾನೆ ಮತ್ತು ಕ್ಷಮಿಸುತ್ತಾನೆ ಮತ್ತು ನಮ್ಮ ಜೀವಿತಕ್ಕಾಗಿ ಆತನ ಯೋಜನೆ ಇದೆ.

ಕುರುಬರು ಕೇವಲ ಆಚರಿಸಿದೆ ಅದರೆ ಅವರು ಸಂವಾದ ಮಾಡಿದರು. ಅವರು ಎಲ್ಲರಿಗೆ ಸುವಾರ್ತೆಯನ್ನು ಸಾರಿದರು. ಯಾರಿಗಾದರೂ ಸುವಾರ್ತೆಯನ್ನು ಸಾರಿ ಎಷ್ಟು ದಿನಗಳಾಗಿವೆ? ನೀವು ಎಂದಾದರೂ, ಯಾರಿಗಾದರೂ ಪ್ರಪಂಚದ ಅತ್ಯುತ್ತಮ ಸುವಾರ್ತೆಯನ್ನು ಹೇಳಿದ್ದೀರಾ? ಶುಭ ಸಮಾಚಾರ, ನಮಗೆ ಪಾಪದ ಕ್ಷಮಾಪಣೆ ಯುಂಟು, ನಮ್ಮ ಜೀವನಕ್ಕೆ ಉದ್ದೇಶವಿದೆ, ಪರಲೋಕದಲ್ಲಿ ನಮಗೆ ಸ್ಥಳವಿದೆ. ಯಾರಾರು ಆತನನ್ನು ನಂಬುತ್ತಾರೋ ಮತ್ತು ಯೇಸು ಕ್ರಿಸ್ತನನ್ನು ಸ್ವೀಕರಿಸುತ್ತಾರೋ ಅವರಿಗೆ ಲಭ್ಯವಿದೆ. ಸ್ನೇಹಿತರೇ ಸುವಾರ್ತೆಯನ್ನು ಸಾರಿದ್ದೀರಾ? ಕುರುಬರು ಎಲ್ಲರಿಗೆ ಸುವಾರ್ತೆಯನ್ನು ಸಾರಿದರು ಎಂದು ಸತ್ಯವೇದವು ಹೇಳುತ್ತದೆ. ಆದುದರಿಂದ ಅವರು ಅಚರಿಸಿದರು ಮತ್ತು ಯೇಸೇಫನು ಸಹಕರಿಸಿದನು. ಕುರುಬರ ಹಾಗೆ, ದೇವರು ಇಲ್ಲಿ ಇದ್ದಾನೆಂದು ಆಚರಿಸಿರಿ ಮತ್ತು ಅವರು ರಕ್ಷಣೆಯ ಸುವಾರ್ತೆಯನ್ನು ಬೇರೆಯವರಿಗೆ ಸಾರಿದರು.

## 3. ಮರಿಯಳು ಯೋಚಿಸಿದಳು !

**ಅದನ್ನು ನೋಡಿದಾಗ ಅವರು ಆ ಮಗುವಿನ ವಿಷಯದಲ್ಲಿ ತಮಗೆ ಮಾತನ್ನು ತಿಳಿಯಪಡಿಸಿದರು. ಅದನ್ನು ಕೇಳಿದವರೆಲ್ಲರೂ ತಮಗೆ ಕುರುಬರು ಹೇಳಿದ ಮಾತುಗಳಿಗೆ ಆಶ್ಚರ್ಯಪಟ್ಟರು. ಆದರೆ ಮರಿಯಳು ಆ ಮಾತುಗಳನ್ನೆಲ್ಲಾ ತನ್ನ ಮನಸ್ಸಿನಲ್ಲಿಟ್ಟುಕೊಂಡು ಯೋಚಿಸುತ್ತಿದ್ದಳು.** ಲೂಕ 2:17-19.



ಮರಿಯಳು 13 ವರ್ಷದಳಾಗಿದ್ದಳು, ಆಕೆಯು ಯೇಸೇಫನನ್ನು ಮದುವೆಯಾಗುವುದಕ್ಕೆ ಮುಂಚಿತವಾಗಿ ಗರ್ಭವತಿಯಾದದ್ದು ಕಂಡು ಬಂತು. ಆಕೆಯು ಕೇವಲ ಯೇಸೇಫನೊಂದಿಗೆ ನಿಶ್ಚಿತಾರ್ಥವಾಗಿದ್ದಳು. ಆಕೆಯು ದೇವರ ಮಗನನ್ನು ತೆಗೆದುಕೊಂಡು ಹೋದಳು. ಇದನ್ನು ನಂಬುವುದಕ್ಕೆ ಯಾರಿಗೂ ಸಾಧ್ಯವಿಲ್ಲ. ಆದರೆ ಮರಿಯಳು ಗಾಬರಿಯಾಗಲಿಲ್ಲ. ಆಕೆಯು ಗಾಬರಿಯಾಗದಿದ್ದಕ್ಕೆ ಕಾರಣವಿತ್ತು ಆಕೆಯು ದೇವರ ವಾಗ್ದಾನಗಳನ್ನು ಆಲೋಚಿಸುತ್ತಿದ್ದಳು. ಯೋಸೇಫನ ಹಾಗೆ ಸಹಕರಿಸಿದನು, ಕುರುಬರು ಸಹಕರಿಸಿದರು. ಮರಿಯಳು ಆಲೋಚಿಸಿದಳು. ಆಕೆಯು ದೇವರ ವಾಕ್ಯಗಳನ್ನು ಅಲೋಚಿಸಿದ್ದಳು. ದೇವದೂತರು ಆ ಮಗುವಿನ ಬಗ್ಗೆ ಹೇಳಿದ ಎಲ್ಲವನ್ನು ಕುರುಬರು ಎಲ್ಲರಿಗೆ ತಿಳಿಸಿದರು. ಕುರುಬರು ಹೇಳಿದ ಕಥೆಯನು ಕೇಳಿ ಎಲ್ಲರಿಗೆ ಆಶ್ಚರ್ಯವಾಯಿತು.

ಆದರೆ ಮರಿಯಳು ಎಲ್ಲವನ್ನು ತನ್ನ ಮನಸ್ಸಿನಲ್ಲಿ ಇಟ್ಟುಕೊಂಡಳು. ಆಕೆಯು ತಾನು ಕೇಳಿದ ಎಲ್ಲಾ ಮಾತುಗಳನ್ನು ತನ್ನ ಹೃದಯದಲ್ಲಿ ಆಲೋಚನೆ ಮಾಡಿದಳು. ದೇವರ ಮಗನ ತಾಯಿಯಾಗಲು ತಾನು ಆರಿಸಿಕೊಳ್ಳಬಹುದಾದ ಎಲ್ಲಾ ಯುವತಿಯರಲ್ಲಿ ಮರಿಯಳನ್ನು ಆಶೀರ್ವದಿಸಲು ದೇವರು ಆರಿಸಿಕೊಂಡನು. ಯಾಕೆಂದರೆ ಆಕೆಯು ದೇವರ ವಾಕ್ಯದ ಕಡೆಗೆ ಗಮನಹರಿಸಿದಳು. ದೇವರು ಮಾತನಾಡಿದಾಗ ಆಕೆಯು ಕೇಳಿದಳು. ಆಕೆಯು ಕೇವಲ ಕೇಳಲಿಲ್ಲ. ಜ್ಞಾಪಕವಿಟ್ಟುಕೊಂಡಳು, ಆಲೋಚಿಸಿದಳು, ಧ್ಯಾನ ಮಾಡಿದಳು. ಆಕೆಯು ನಿರಂತರವಾಗಿ ಎಲ್ಲವನ್ನೂ ಆಲೋಚಿಸಿದಳು. ದೇವದೂತರು ಹೇಳಿದ್ದನ್ನು ಎಲ್ಲರು ಕೇಳಿಸಿಕೊಂಡರು. ಆಶ್ಚರ್ಯಪಟ್ಟರು.

ಆದರೆ ಮರಿಯಳು ಆಲೋಚಿಸಿದಳು. ದೊಡ್ಡ ವ್ಯತ್ಯಾಸ, ಸ್ನೇಹಿತರೇ, ನೀನು ದೇವರ ವಾಕ್ಯದ ವ್ಯಕ್ತಿಯಾಗಿದ್ದರೆ. ದೇವರು ನೀನು ನಂಬದೆ ಇರುವ ರೀತಿಯಲ್ಲಿ ದೇವರು ನಿಮ್ಮನ್ನು ಆಶೀರ್ವದಿಸುವನು. ನೀನು ಪ್ರಪಂಚದ ವ್ಯಕ್ತಿಯಾಗಿದ್ದರೆ, ದೇವರ ಆಶೀರ್ವಾದಕ್ಕೆ ಯಾವುದೇ ಸ್ಥಳವಿಲ್ಲ ಕಾರಣ ನೀನು ದೇವರ ವಾಕ್ಯವನ್ನು ಜ್ಞಾಪಕ ಮಾಡಿಕೊಳ್ಳುತ್ತಿಲ್ಲ. ನೀನು ಪ್ರಪಂಚದ ಬಗ್ಗೆ ಆಲೋಚನೆ ಮಾಡುತ್ತೀಯಾ. ಪ್ರಪಂಚದ ಸಂಗತಿಗಳ ಬಗ್ಗೆ ಆಲೋಚನೆ ಮಾಡುತ್ತೀಯಾ.

ನೀವು ಮರಿಯಳಂತೆ ಆಶೀರ್ವದಿಸಬೇಕೆಂದು ಬಯಸಿದರೆ, ನೀವು ನಿರಂತರವಾಗಿ ದೇವರ ವಾಕ್ಯವನ್ನು ಆಲೋಚಿಸಬೇಕು. ದೇವರು ತನ್ನ ಹೃದಯದಲ್ಲಿ ಹೇಳಿದ ವಿಷಯಗಳ ಬಗ್ಗೆ ಅವಳು ನಿಶ್ಚಲವಾಗಿ ಯೋಚಿಸುವುದನ್ನು ಮುಂದುವರೆಸಿದಳು ಎಂದು ಸತ್ಯವೇದವು ಹೇಳುತ್ತದೆ. ದೇವರ ವಾಕ್ಯದ ಮೇಲೆ ಆಲೋಚಿಸುವುದು. ಇದು ಈಗ ವಾಗ್ದಾನ ಮಹಿಳೆಗೆ ಮಾತ್ರವಲ್ಲ. ಯಾರರು ಆತನನ್ನು ಪ್ರೀತಿಸುತ್ತಾರೋ, ಆತನ ವಾಕ್ಯವನ್ನು ಕಲಿಯುತ್ತಾರೋ ಅವರಿಗೆ ಈ ವಾಗ್ದಾನ. ಆದರೆ ಬಿಡುಗಡೆಯನ್ನುಂಟು ಮಾಡುವ ಸರ್ವೋತ್ತಮ ಧರ್ಮಪ್ರಮಾಣವನ್ನು ಲಕ್ಷ್ಯ ಕೊಟ್ಟು ನೋಡಿ ಇನ್ನೂ ನೋಡುತ್ತಲೇ ಇರುವನು ವಾಕ್ಯವನ್ನು ಕೇಳಿ ಮರೆತು ಹೋಗುವವನಾಗಿರದೆ ಅದರ ಪ್ರಕಾರ ನಡೆಯುವವನಾಗಿದ್ದು ತನ್ನ ನಡತೆಯಿಂದ ಧನ್ಯನಾಗುವನು. ಯಾಕೋಬ 1:25.

ನೀವು ದೇವರ ವಾಕ್ಯವನ್ನು ಲಕ್ಷ್ಯ ಕೊಟ್ಟು ಆಧ್ಯಾಯನ ಮಾಡಿದರೆ ಅದು ನಿಮ್ಮನ್ನು ಬಿಡುಗಡೆಗೊಳಿಸುತ್ತದೆ. ಸತ್ಯವು ನಿಮ್ಮನ್ನು ಬಿಡುಗಡೆಗೊಳಿಸುತ್ತದೆ. ದೇವರ ವಾಕ್ಯವು ಹೇಳಿದಂತೆ ನೀವು ಮಾಡಿದರೆ ನಿಮಗೆ ಆಶೀರ್ವಾದವು ಬರುತ್ತದೆ. ನಿಮ್ಮ ಮನೆಯಲ್ಲಿ ಸತ್ಯವೇದವು ಇದ್ದರೆ ದೇವರು ನಿಮ್ಮನ್ನು ಆಶೀರ್ವದಿಸುವುದಿಲ್ಲ. ನಿಮ್ಮ ಕೆಲಸದ ಕಪಾಟಿನಲ್ಲಿ ಇದ್ದರೆ, ಆದರೆ ನೀವು ಓದಿದರೆ, ಧ್ಯಾನ ಮಾಡಿದರೆ, ಕಂಠ ಪಾಠ ಮಾಡಿದರೆ, ಅಧ್ಯಾಯನ ಮಾಡಿದರೆ, ಯೋಚಿಸಿದರೆ, ಅಳವಡಿಸಿಕೊಂಡರೆ **ಈ ಧರ್ಮಶಾಸ್ತ್ರವು ಯಾವಾಗಲೂ ನಿನ್ನ ಬಾಯಲ್ಲಿರಲಿ; ಹಗಲಿರುಳು ಅದನ್ನು ಧ್ಯಾನಿಸುತ್ತಾ ಅದರಲ್ಲಿ ಬರೆದಿರುವುದನ್ನೆಲ್ಲಾ ಕೈಕೊಂಡು ನಡಿ. ಆಗ ನಿನ್ನ ಮಾರ್ಗದಲ್ಲೆಲ್ಲಾ ಸಫಲನಾಗುವಿ. ಕೃತಾರ್ಥನಾಗುವಿ.** ಯೆಹೋಶುವ 1:8. ಆದ್ದರಿಂದ ಅದನ್ನು ನೆನಪಿಸಿಕೊಳ್ಳಿ, ಅಧ್ಯಯನ ಮಾಡಿ, ಧ್ಯಾನಿಸಿ ಮತ್ತು ವಾಕ್ಯವನ್ನು ಪಾಲಿಸು ಎಂದು ಹೇಳುತ್ತದೆ. ಆಗ ನೀವು ಏಳಿಗೆ ಹೊಂದುತ್ತೀರಿ ಮತ್ತು ನೀವು ಯಶಸ್ವಿಯಾಗುತ್ತೀರಿ. ಅದು ದೇವರ ವಾಗ್ದಾನ. ದೇವರು ಸುಳ್ಳು ಹೇಳಲು ಮನುಷ್ಯನಲ್ಲ. ನೀವು ದೇವರ ವಾಕ್ಯವನ್ನು ಎಷ್ಟು ಹೆಚ್ಚು ಅನುಸರಿಸುತ್ತೀರಿ, ದೇವರು ನಿಮ್ಮ ಜೀವನದಲ್ಲಿ ಹೆಚ್ಚು ಯಶಸ್ಸನ್ನು ತರಬಹುದು. ನೀವು ಬಯಸಿದರೆ, ಅದು ಧರ್ಮಗ್ರಂಥದಲ್ಲಿ ಸಮೃದ್ಧಿ ಮತ್ತು ಯಶಸ್ಸಿನ ಏಕೈಕ ಭರವಸೆಯಾಗಿದೆ ಎಂದು ಅವರು ಹೇಳುತ್ತಾರೆ. ಇದು ಆಲೋಚಿಸಲು ಮತ್ತು ದೇವರ ವಾಕ್ಯವನ್ನು ಮಾಡುವುದರೊಂದಿಗೆ ಸಂಬಂಧ ಹೊಂದಿದೆ.

## 4. ಜೋಯಿಸರು ಪವಿತ್ರಗೊಳಿಸಿದರು!

**ಮತ್ತು ಆ ಮನೆಯೊಳಕ್ಕೆ ಹೋಗಿ ಆ ಕೂಸನ್ನು ಅದರ ತಾಯಿಯಾದ ಮರಿಯಳ ಬಳಿಯಲ್ಲಿ ಕಂಡು ಅದಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿ ತಮ್ಮ ಗಂಟುಗಳನ್ನು ಬಿಚ್ಚಿ ಅದಕ್ಕೆ ಚಿನ್ನ ಧೂಪ, ರಕ್ತಬೋಳಗಳನ್ನು ಕಾಣಿಕೆಯಾಗಿ ಕೊಟ್ಟರು.** ಮತ್ತಾಯ 2:11. ಜೋಯಿಸರು ಅರಸನಾದ ಸಲಹೆಗಾರರು ಮತ್ತು ಇರಾಕ್ ಅಥವಾ ಇರಾನ್‌ನ ಖಗೋಳ ಶಾಸ್ತ್ರಜ್ಞರಂತಿದ್ದಾರೆ, ಅದು ಬಾಬಿಲೋನಿಯನ್ ಸಾಮ್ರಾಜ್ಯ ಅಥವಾ ಪರ್ಷಿಯನ್ ಸಾಮ್ರಾಜ್ಯವಾಗಿತ್ತು. ದಾನಿಯೇಲನು ಜೋಯಿಸನಾಗಲು ತರಬೇತಿ ಪಡೆದನು. ಪೂರ್ವದ ಜೋಯಿಸರು ಭೂಮಿಯ ಮೇಲೆ ಅತ್ಯಂತ ವಿದ್ಯಾವಂತ ಜನರು. ಅವರು ವಿಜ್ಞಾನಿಗಳು, ಅವರು ಮೇಧಾವಿಗಳು, ಅವರು ಜ್ಯೋತಿಷ್ಯ ಶಾಸ್ತ್ರದಲ್ಲಿ ಪ್ರವೀಣರು, ಆರೋಗ್ಯ, ಭಾಷೆಗಳು ಮತ್ತು ಸಾಹಿತ್ಯ. ಅವರು ಆ ಸಮಯದಲ್ಲಿ ಭೂಮಿಯ ಮೇಲಿನ ಅತ್ಯಂತ ಬುದ್ಧಿವಂತ, ಹೆಚ್ಚು ವಿದ್ಯಾವಂತ ಜನರು. ಈಗ ಈ ಜನರು ಕುರುಬರಿಗೆ ತದ್ವಿರುದ್ಧವಾಗಿದ್ದಾರೆ. ಈ ಜನರು, ಜೋಯಿಸಿರು, ಬೇತ್ಲಹೇಮ್‌ಗೆ ಪೂರ್ವದಿಂದ ಪ್ರಯಾಣ ಮಾಡಿ ಬಂದರು.

ಈಗ ಇರಾಕ್, ಇರಾನ್, ಪರ್ಷಿಯಾ ಅಥವಾ ಬ್ಯಾಬಿಲೋನ್‌ನಿಂದ ಬೇತ್ಲೇಹೇಮ್‌ಗೆ ಪ್ರಯಾಣಿಸಲು ಸಾಕಷ್ಟು ಹಣದ ಅಗತ್ಯವಿದೆ. ಆದರೆ ಬಹಳ ಶ್ರೀಮಂತರು ಮತ್ತು ಅವರಿಗೆ ಸಮಯದ ಬಹಳ ಅಗತ್ಯವಿದೆ. ಆದರೆ ಅವರು ಇದನ್ನು ಮಾಡಿದರು ಯಾಕೆಂದರೆ ಇದು ಬೌದ್ಧಿಕ ಅನ್ವೇಷಣೆಯಾಗಿದೆ. ಅವರು ಆಕಾಶದಲ್ಲಿ ನಕ್ಷತ್ರವನ್ನು ಕಂಡರು. ಅವರು ಧರ್ಮ ಗ್ರಂಥವನ್ನು ಅಧ್ಯಯನ ಮಾಡಿದರು. ಅವರು ಹಸ್ತ ಪ್ರತಿಗಳನ್ನು ಅಧ್ಯಯನ ಮಾಡಿದರು. ಅವರು ಸಂಪ್ರದಾಯಗಳನ್ನು ಅಧ್ಯಯನ ಮಾಡಿದರು. ಲೋಕದ ರಕ್ಷಕನು ಬೇತ್ಲೇಹೇಮ್‌ನಲ್ಲಿ ಜನಿಸುತ್ತಾನೆ ಎಂಬುವುದಕ್ಕೆ ಇದು ಸಂಕೇತವಾಗಿದೆ. ಆದ್ದರಿಂದ ಸಮಯ ಮತ್ತು ಹಣದ ದೊಡ್ಡ ವಿಸ್ತಾರದಲ್ಲಿ, ಅವರು ಬೇತ್ಲಹೇಮ್‌ಗೆ ಪಯಣಿಸಿದರು. ಅವರು ಸತ್ಯವನ್ನು ಹುಡುಕಿದರು. ಅವರು ದೇವರನ್ನು ಹುಡುಕುತ್ತಿದ್ದಾರೆ ಅದು ಯಾವಾಗಲೂ ಮಾಡಲು ಬುದ್ಧಿವಂತ ವಿಷಯವಾಗಿದೆ.

ಪ್ರಿಯ ಸ್ನೇಹಿತರೇ, ನೀವು ಸತ್ಯವನ್ನು ಹುಡುಕುತ್ತಿದ್ದೀರಾ? ಒಂದು ವೇಳೆ ಹೌದಾದರೆ ಯೇಸುವನ್ನು ಆಹ್ವಾನಿಸಿ. ಆತನು ನಿಮ್ಮನ್ನು ಸ್ವೀಕರಿಸುವುದಕ್ಕೆ ತಯಾರು ಆಗಿದ್ದಾನೆ. ಯೇಸುವಿನ ಬಳಿಗೆ ಬರುವುದಕ್ಕೆ ನೀವು ಏನು ವಿಶೇಷವಾದದ್ದನ್ನು ಮಾಡಬೇಕಾಗಿಲ್ಲ. ನೀವು ಹೇಗೆ ಇದ್ದೀರಾ ಹಾಗೆ ಬನ್ನಿರಿ. ಬುದ್ಧಿವಂತರು ಇನ್ನೂ ಯೇಸುವನ್ನು ಹುಡುಕುತ್ತಾ ಇದ್ದಾರೆ. ಮೂರ್ಖರು ಆತನನ್ನು ಹುಡುಕುವುದಿಲ್ಲ. ಮೂರ್ಖರು ಸಿದ್ಧವಿಲ್ಲದ ಜೀವನವನ್ನು ಎದುರಿಸುತ್ತಾರೆ ಮತ್ತು ಅನಿವಾರ್ಯದ ಮರಣವನ್ನು ಎದುರಿಸುತ್ತಾರೆ.

ಯಾವಾಗ ಜೋಯಿಸರು ಮಗುವನ್ನು ತನ್ನ ತಾಯಿಯಾದ ಮರಿಯಾಳ ಜೊತೆಗೆ ನೋಡಿದಾಗ ಅವರು ಸಾಷ್ಟಾಂಗ ನಮಸ್ಕಾರ ಮಾಡಿ ಆರಾಧಿಸಿದರು. **ಆ ಮನೆಯೊಳಕ್ಕೆ ಹೋಗಿ ಆ ಕೂಸನ್ನು ಅದರ ತಾಯಿಯಾದ ಮರಿಯಾಳ**

*(9ನೇ ಪುಟಕ್ಕೆ)*

## TAX EXEMPTION

Donations by any individual or organization from India to **Echo of His Call Educational Trust** are eligible for Income Tax exemption under Section 80G of the Income Tax Act. Official receipts will be issued for this purpose. Please make your Demand Drafts / Cheques / M.O. for such donations in favour of **Echo of His Call Educational Trust** and send to us, along with your Aadhar Number and PAN for getting Income Tax Exemption.

| | | |
|---|---|---|
| **Account Name** | : | **ECHO OF HIS CALL EDUCATIONAL TRUST** |
| **Account Number** | : | **1023 2923 805** |
| **Bank Name** | : | **STATE BANK OF INDIA** |
| **Branch** | : | **TRIPLICANE, CHENNAI - 600 005** |
| **IFSC Code** | : | **SBIN 0000249** |
| **SWIFT Code** | : | **SBI NIN BB 455** |



# ಹಳ್ಳದಿಂದ ಅರಮನೆಗೆ

# PIT TO PALACE

(ಪಾಸ್ಟರ್ ಎಸ್. ಸ್ಯಾಮ್ ಸೆಲ್ವರಾಜ್‌ರವರ ಜೀವನದ ಅನುಭವಗಳು)

"ಯಾರು ಓದುತ್ತಾರೋ ಅವರೇ ಅರ್ಥವಾಗಲಿ" (ಮತ್ತಾಯ 24:15)

## ಬಲಹೀನರ ಪ್ರಾರ್ಥನೆಗೆ ದೇವರು ಉತ್ತರಿಸುತ್ತಾನೆ! GOD ANSWERS THE PRAYER OF THE WEAK!

10-08-1969 ರಿಂದ ದೇವರ ಕೃಪೆಯಿಂದ, ನಾನು ಸೇವೆಯ ತರಬೇತಿ, ಕರಪತ್ರಗಳ ವಿತರಣೆ, ಪ್ರಮುಖ ಪ್ರಾರ್ಥನಾ ಸಭೆಗಳು ಮತ್ತು ಸಭೆಗಳಲ್ಲಿ ವಾಕ್ಯವನ್ನು ಬೋಧಿಸುವುದರೊಂದಿಗೆ ನನ್ನ ಸುವಾರ್ತೆ ಸೇವೆಯನ್ನು ಪ್ರಾರಂಭಿಸಿದೆ.



ಯಾರೂ ನನ್ನನ್ನು ದೇವರ ಸೇವಕ ಎಂದು ಗುರುತಿಸಲಿಲ್ಲ, ಯಾಕೆಂದರೆ ನಾನು ಚಿಕ್ಕವನಾಗಿದ್ದೆ ಮತ್ತು ಈ ಕ್ಷೇತ್ರಕ್ಕೆ ಹೊಸಬನಾಗಿದ್ದೆ. ನಾನು ಸೇವೆಯನ್ನು ಮುಂದುವರಿಸುವುದಕ್ಕೆ ಹಣಕಾಸಿನ ದೊಡ್ಡ ಅಡ್ಡಿಯಾಗಿತ್ತು. ಪರಿಣಾಮವಾಗಿ ನಾನು ಪ್ರತಿದಿನ ಅನೇಕ ಮೈಲುಗಳಷ್ಟು ನಡೆಯಬೇಕಾಯಿತು ಮತ್ತು ನನ್ನ ಸೇವೆಯನ್ನು ಮುಂದುವರಿಸಬೇಕಾಗಿತ್ತು. ಆದ್ದರಿಂದ ದೀರ್ಘ ನಡಿಗೆಗಳು ಮತ್ತು ಹಸಿವು ನನ್ನ ಸೇವೆಯ ಒಂದು ಭಾಗವಾಗಿತ್ತು. ಸೇವೆಯನ್ನು ಮಾಡಲು ಮತ್ತು ಸೇವೆಗೆ ಉಪಕರಣಗಳನ್ನು ಖರೀದಿಸಲು ಹಣಕಾಸಿನ ಅಗತ್ಯವಿತ್ತು.

ಪ್ರಾರಂಭದ ನನ್ನ ಸೇವೆಯಲ್ಲಿ ನನ್ನ ಸ್ನೇಹಿತರ ಹತ್ತಿರವಾಗಲಿ ಮತ್ತು ಸಂಬಂಧಿಕರ ಬಳಿಯಾಗಲಿ ಸಹಾಯವನ್ನು ಕೇಳಿದಂತೆ ನನಗೆ ಬಲವಾದ ದೃಢ ನಿಶ್ಚಯವಿತ್ತು. ಯಾಕೆಂದರೆ ನನ್ನನ್ನು ಕರೆದ ದೇವರು ಆತನ ಕೆಲಸಕ್ಕಾಗಿ ಸಹಾಯವನ್ನು ಒದಗಿಸುವನು. ಈ ಹೊತ್ತಿನವರೆಗೆ ಈ ಸಿದ್ಧಾಂತದ ಮೇಲೆ ನಿಲ್ಲುವಂತೆ ದೇವರು ನನಗೆ ಸಹಾಯ ಮಾಡಿದನು. ಈ ಸಿದ್ಧಾಂತವನ್ನು ಅನುಸರಿಸಿ ನಾನು ವರ್ಣಿಸಲಾಗದ ಕಷ್ಟಗಳನ್ನು ಮತ್ತು ಸವಾಲುಗಳನ್ನು ಎದುರಿಸಬೇಕಾಯಿತು.

ಒಂದು ನಿರ್ದಿಷ್ಟ ಸನ್ನಿವೇಶದಲ್ಲಿ ನಿರ್ವಹಿಸಲು ಸಾಧ್ಯವಾಗದ ಮಟ್ಟಿಗೆ ನಾನು ಮಾನಸಿಕವಾಗಿ ಮತ್ತು ದೈಹಿಕವಾಗಿ ಪ್ರಭಾವಿತನಾಗಿದ್ದೆ. ನನ್ನ ಸಂಬಂಧಿಕರಲ್ಲಿ ಒಬ್ಬರಾದ, ಸಹೋ, ಸ್ವರ್ಣರಾಜ್ ಸಾರಿಗೆ ಇಲಾಖೆಯ ಸರ್ಕಾರಿ ಕೆಲಸವನ್ನು ಪಡೆದುಕೊಳ್ಳುವುದಕ್ಕೆ ಪ್ರಯತ್ನಿಸಿ ದರು. ದೇವರ ಸೇವಕರಾದ ಕಾಲೇಬ ಪಾಲಪಲ್ಲಿ. ಮಾತಿಕೋಡ್ ನನ್ನ ಗೆಳೆಯ ಖಾಸಗಿಯ ಕಂಪನಿಯಲ್ಲಿ ಒಂದು ಕೆಲಸ ವನ್ನು ಕೊಡಿಸುವುದಕ್ಕೆ ಪ್ರಯತ್ನಿಸಿದರು. ಈ ಇಬ್ಬರ ಪ್ರಯತ್ನವು ವ್ಯರ್ಥವಾಯಿತು.



ಇಂತಹ ಸನ್ನಿವೇಶದಲ್ಲಿ, 17-05-1971 ರಂದು ಉಪವಾಸ ಪ್ರಾರ್ಥನೆ ಮಾಡುತ್ತಿರುವಾಗ ಕರ್ತನ ಆತ್ಮವು ನನಗೆ ಶಾಶ್ವತ ಕೆಲಸಕ್ಕಾಗಿ ಪ್ರಾರ್ಥನೆ ಮಾಡುವುದಕ್ಕೆ ಭಾರವನ್ನು ತರಿಸಿತು. ಪ್ರಾರ್ಥನೆಯ ಫಲವಾಗಿ, ದೃಢ ನಿಶ್ಚಯದಿಂದ ಈ ಮಾತುಗಳನ್ನು ಸ್ವೀಕರಿಸಿಕೊಂಡೆನು. ಒಂದು ತಿಂಗಳೊಳಗೆ ನಾನು ನಿನಗೆ ಖಾಯಂ ಉದ್ಯೋಗವನ್ನು ನೀಡುತ್ತೇನೆ ಮತ್ತು ನೀನು ಅದರೊಂದಿಗೆ ಬದುಕಬಹುದು. ದೇವರ ವಾಕ್ಯದ ಅನುಸಾರವಾಗಿ, ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಅತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು. ನಾವು ಏನು ಬೇಡಿಕೊಂಡರೂ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬುದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬುದೂ ನಮಗೆ ಗೊತ್ತಾಗಿದೆ. 1 ಯೋಹಾನ 5:14-15. ನಾನು ಹೊಸ ಕೆಲಸವನ್ನು ಪಡೆದುಕೊಂಡಿದ್ದೇನೆ ಎಂದು ನಂಬಿ, ಸೇರಿಸಿಕೊಳ್ಳುವುದಕ್ಕೆ ನಾನು ಎಲ್ಲವನ್ನು ಸಿದ್ಧತೆ ಮಾಡಿಕೊಂಡಿದ್ದೇನು. ನನ್ನ ಚಟುವಟಿಕೆಗಳನ್ನು ನೋಡಿದಂತಹ ಅನೇಕರು ನನ್ನ ಮಾನಸಿಕ ಸ್ಥಿತಿಯ ಬಗ್ಗೆ ಅನುಮಾನಪಟ್ಟರು. ಆದರೆ ನಾನು ಅವರ ಬಗ್ಗೆ ಲಕ್ಷ ಕೊಡದೆ, ನಾನು ಸಂಪೂರ್ಣವಾಗಿ ದೇವರನ್ನು ನಂಬಿದೆನು.





ಹೀಗೆ ದಿನಗಳು ಕಳೆದ ಹಾಗೆ ದಿನಾಲು ನಾನು ಪೋಸ್ಟ್‌ಮ್ಯಾನ್‌ನನ್ನು



My co-workers when I left my Government job - 1994





*Farewell by Mr. A. Shenbagam B.E., Chief Inspector of Factories with my co-workers at the time of leaving my Government job in 1994*

ಬಹಳ ಉತ್ಸುಕನಾಗಿ ಕಾಯುತ್ತಾ ಇದ್ದೆ. ಒಂದು ತಿಂಗಳು ಕಳೆದು ಹೋಯಿತು, ಸರಿಯಾಗಿ 18-06-1971 ಕರ್ತನ ಮೇಲೆ ನಂಬಿಕೆ ಇಟ್ಟು ಅಂಚೆ ಕಛೇರಿಗೆ ಹೋದೆನು. ಪೋಸ್ಟ್‌ಮ್ಯಾನ್ ಸಹೋ, ನಿಲ್ಲೈಪ್ಪಾನ್ ನನ್ನನ್ನು ನೋಡಿದ ತಕ್ಷಣ, ನನಗೋಸ್ಕರ ಏನು ಇದೆ ಎಂದು ನನಗೆ ಸನ್ನೆ ಮಾಡಿದನು. ದೇವರ ವಾಗ್ದಾನವನ್ನು ಆತುಕೊಂಡವನಾಗಿ, ಅಲ್ಲೇ ಕೂತುಕೊಂಡು ಪ್ರಾರ್ಥನೆ ಮಾಡಿದೆನು. ಕೆಲವೇ ನಿಮಿಷಗಳಲ್ಲಿ ನನಗೆ ಆಶ್ಚರ್ಯವಾಗುವಂತೇ ಅದೇ ಪೋಸ್ಟ್‌ಮ್ಯಾನ್ ಹೇಳಿದರು, ಸ್ಯಾಮ್ ನೀವು ನೋಂದಾಯಿತ ಪೋಸ್ಟ್ ಅನ್ನು ಸ್ವೀಕರಿಸಿದ್ದೀರಿ, ಸಹಿ ಮಾಡಿ ಮತ್ತು ಸಂಗ್ರಹಿಸಿ.

ನಾನು ಪತ್ರವನ್ನು ತೆಗೆದಾಗ, ಟಿಎನ್‌ಪಿಎಸ್‌ಸಿ ಕಡೆ ಯಿಂದ ನೇಮಕಾತಿಯ ಪತ್ರವನ್ನು ಕಂಡೆನು. ಕೆಲಸಗಾರರ ಯಿಂದ ನೇಮಕಾತಿಯ ಪತ್ರವನ್ನು ಕಂಡೆನು. ಕೆಲಸಗಾರರ ಇಲಾಖೆಯಿಂದ ಚೆನ್ನೈಯಲ್ಲಿ ಸೇರಿಕೊಳ್ಳುವುದಕ್ಕೆ. ಕೆಲವು ವರ್ಷಗಳ ಹಿಂದೆ ಪರೀಕ್ಷೆಯನ್ನು ಬರೆದ ಪ್ರತಿಫಲವಾಗಿದೆ. ನನ್ನ ಉತ್ಸಾಹದ ಪ್ರಾರ್ಥನೆಯಿಂದ ಅದು ತ್ವರೆಯಾಯಿತು ಮತ್ತು ಒಂದು ಅದ್ಭುತ ಸಂಭವಿಸಿತು. ಪ್ರಾರ್ಥನೆಯು ಅದ್ಭುತವಾದ ಆತ್ಮೀಕ ಆಯುಧವಾಗಿದೆ.

ನಾನು ಸಂತೋಷವಾಗಿ ಚೆನ್ನೈಗೆ ಬಂದು ಕೆಲಸಕ್ಕೆ ಹಾಜರಿಯಾದೆನು. ನನ್ನ ಕೆಲಸದಿಂದ ನನ್ನ ಸಂಬಳದ ಹೆಚ್ಚಿನ ಭಾಗವನ್ನು ನನ್ನ ಸೇವೆಯಲ್ಲಿ ಸೇವೆಯಲ್ಲಿ ಹೂಡಿಕೆ ಮಾಡಿದೆನು. ನಂತರ, 1994 ರಲ್ಲಿ ಕರ್ತನು ನನಗೆ ಆಜ್ಞೆ ಮಾಡಿದನು ಕೆಲಸವನ್ನು ಬಿಟ್ಟು ಸಂಪೂರ್ಣ ಸೇವೆಗಾಗಿ ಮತ್ತು ಅತನ ಕರೆಯುವಿಕೆಗೆ ವಿಧೇಯನಾಗಿ ಮತ್ತು ನಾನು ಸಂಪೂರ್ಣ ಸೇವೆಯನ್ನು ತೊಡಗಿಸಿಕೊಂಡೆನು.

ನಮ್ಮ ದೇವರು ಒಳ್ಳೆಯ ದೇವರು! ನಮ್ಮ ದೇವರು ಸಮಯ ಪಾಲನೆ ಮಾಡುವನು! ಬಲವಾಗಿ ಆತನೊಂದಿಗೆ ಇರ್ರಿ!! ನಿಮಗೆ ಸಫಲತೆ ಉಂಟಾಗುವುದು!!! ಆತನು ನಿಮ್ಮನ್ನು ಬಹಳ ತೀಕ್ಷ್ಣವಾಗಿ ನೋಡುತ್ತಾ ಇದ್ದಾನೆ.

**ಸ್ಥಿರ ಚಿತ್ತವನ್ನು ಶಾಂತಿಯಲ್ಲಿ, ನೆಲೆಗೊಳಿಸಿ ಕಾಯುವಿ; ಅವನಿಗೆ ನಿನ್ನಲ್ಲಿ ಭರವಸವಿದೆ.** ಯೆಶಾಯ 26:3. ***

---

*(7ನೇ ಪುಟದಿಂದ)*

**ಬಳಿಯಲ್ಲಿ ಕಂಡು ಅದಕ್ಕೆ ಸಾಷ್ಟಾಂಗ ನಮಸ್ಕಾರ ಮಾಡಿ ತಮ್ಮ ಗಂಟುಗಳನ್ನು ಬಿಚ್ಚಿ ಅದಕ್ಕೆ ಚಿನ್ನ, ಧೂಪ ರಕ್ತ ಬೋಳಗಳನ್ನು ಕಾಣಿಕೆಯಾಗಿ ಕೊಟ್ಟರು.** ಮತ್ತಾಯ 2:11.

ಅವರು ಮರಿಯಾಳಿಗೆ ಸಾಷ್ಟಾಂಗ ಮಾಡಿ ಆರಾಧನೆಯನ್ನು ಮಾಡಲಿಲ್ಲ ಎಂಬುದನ್ನು ನಾವು ಗಮನಿಸಬೇಕು. ಆಕೆಯು ಮನೆಯಲ್ಲಿ ಇದ್ದಳು. ಅವರು ಯೇಸುವಿಗೆ ಸಾಷ್ಟಾಂಗ ಮಾಡಿ ಆರಾಧಿಸಿದರು. ಅವರು ತಮ್ಮ ಆಸ್ತಿಯನ್ನು ಬಿಚ್ಚಿ ಆತನಿಗೆ ಚಿನ್ನ, ಧೂಪ, ರಕ್ತಬೋಳವನ್ನು ಕಾಣಿಕೆಯಾಗಿ ಸಲ್ಲಿಸಿದರು. ಈ ಮೂರು ಉಡುಗೊರೆಗಳಲ್ಲಿ ಪ್ರತಿಯೊಂದು ಯೇಸು ತನ್ನ ಜೀವನ ಮತ್ತು ಮರಣ ಮತ್ತು ಪುನರುತ್ಥಾನದ ಸಮಯದಲ್ಲಿ ನಮಗಾಗಿ ಏನು ಮಾಡುತ್ತಾನೆ ಎಂಬುದರ ಸಂಕೇತವಾಗಿದೆ. ಕನಸಿನಲ್ಲಿ ದೇವರಿಂದ ಎಚ್ಚರಿಸಲ್ಪಟ್ಟ ಜೋಯಿಸರು ಬೇರೆ ರೀತಿಯಲ್ಲಿ ಮನೆಗೆ ಮರಳಿದರು.

ಎಲ್ಲಾ ಸಮಯದಲ್ಲಿ ನೀವು ಯೇಸು ವಿನ ಸಂಗಡವಿದ್ದರೆ. ನಿಮ್ಮ ಮಾರ್ಗಗಳು ಬದಲಾಗುತ್ತವೆ. ನೀವು ನಡೆಯು ರೀತಿಯು ಬದಲಾಗುತ್ತದೆ. ನೀವು ಕೆಲಸ ಮಾಡುವಂತ ರೀತಿಯು ಬದಲಾಗುತ್ತದೆ. ದೇವರಷ್ಟು ದೊಡ್ಡವರು ನಮ್ಮ ಜೀವನದಲ್ಲಿ ಬರಲು ಸಾಧ್ಯವಿಲ್ಲ ಮತ್ತು ನಮ್ಮನ್ನು ಬದಲಾಯಿಸಲು ಸಾಧ್ಯವಿಲ್ಲ. ನಿಮ್ಮ ಜೀವನದಲ್ಲಿ ನೀವು ದೇವರನ್ನು ಹೊಂದಿದ್ದೀರಿ ಮತ್ತು ಅದು ನಿಮ್ಮನ್ನು ಬದಲಾಯಿಸಲಿಲ್ಲ ಎಂದು ನೀವು ಭಾವಿಸಿದರೆ, ನೀವು ಬೇರೆ ಏನನ್ನಾದರೂ ಹೊಂದಿದ್ದೀರಿ. ಆದರೆ ದೇವರಲ್ಲ. ಯಾಕೆಂದರೆ ದೇವರು ದೊಡ್ಡವನು. ನಿಮ್ಮ ಮಾರ್ಗಗಳನ್ನು ನೀವು ಬದಲಾಯಿಸದೆ ಹೋದರೆ ಆತನು ನಿಮ್ಮ ಜೀವನದಲ್ಲಿ ಆತನು ಬರಲು ಸಾಧ್ಯವಿಲ್ಲ. ಜೋಯಿಸರು ಯೇಸುವಿನ ಬಳಿಗೆ ಬರಲು ಅವರಿಗೆ ಬಹಳಷ್ಟು ವೆಚ್ಚವಾಯಿತು. ಆದರೆ ಯಾವಾಗ ಆತನನ್ನು ನೋಡಿದರು, ಅವರು ಆತನನ್ನು ಆರಾಧಿಸಿದರು. ಇಲ್ಲಿ ನಾಲ್ಕನೆಯ ಅಂಶ, ನೀವು ಆಶೀರ್ವದಿಸಲ್ಪಡಬೇಕಾದರೆ, ನಿಮ್ಮ ಜೀವಿತವು ಆಶೀರ್ವದಿಸಲ್ಪಡಬೇಕಾದರೆ, ನೀವು ಜೋಯಿಸರ ಹಾಗೆ ಇರಬೇಕು. ನಿಮ್ಮ ಸಮಯವನ್ನು ಸಮರ್ಪಿಸಬೇಕು, ನಿಮ್ಮ ಕಾಣಿಕೆಗಳನ್ನು ಯೇಸುವಿಗೆ ಸಲ್ಲಿಸಬೇಕು. ಅವರು ಯೇಸುವಿಗಾಗಿ ಕಾಣಿಕೆಗಳನ್ನು ತಂದರು. ನಿಮ್ಮ ಜೀವಿತದಲ್ಲಿ ಪಡೆದುಕೊಂಡ ಎಲ್ಲವುಗಳು ಆತನಿಂದ ಪಡೆದುಕೊಂಡಿದ್ದೀರಿ. ನಿಮಗೆ ದೇವರು ಇಲ್ಲದೆ ಯಾವುದು ಇಲ್ಲ. ಆತನು ನಿಮಗೆ ಏನು ಕೊಟ್ಟಿದ್ದಾನೋ ಆತನಿಗೆ ತಿರುಗಿ ಕೊಡುವುದು. ಆತನು ತೆಗೆದುಕೊಂಡು ನಿಮಗೆ ಹೆಚ್ಚಾಗಿ ಮರಳಿ ತಿರುಗಿ ಕೊಡುವನು. **ಆದ್ದರಿಂದ ಸಹೋದರರೇ, ದೇವರ ಕನಿಕರವನ್ನು ನಿಮ್ಮ ನೆನಪಿಗೆ ತಂದು ನಿಮ್ಮನ್ನು ಬೇಡಿಕೊಳ್ಳುವುದೇನಂದರೆ ನೀವು ನಿಮ್ಮ ನಿಮ್ಮ ದೇಹಗಳನ್ನು ದೇವರಿಗೆ ಮೀಸಲಾಗಿಯೂ ಮೆಚ್ಚುಗೆಯಾಗಿಯೂ ಇರುವ ಸಜೀವ ಯಜ್ಞವಾಗಿ ಅರ್ಪಿಸಿರಿ; ಇದೇ ನಿಮ್ಮ ವಿವೇಕ ಪೂರ್ವಕವಾದ ಆರಾಧನೆಯು.** ರೋಮ 12:1 ಆದುದರಿಂದ ಬನ್ನಿ ನಾವು ನಮ್ಮ ಸಮಯವನ್ನು, ಜೀವಿತವನ್ನು, ನಮ್ಮ ಕಾಣಿಕೆಗಳನ್ನು ಯೇಸುವಿಗೆ ಸಮರ್ಪಿಸೋಣ.

**ಇದು ಮಾತ್ರವಲ್ಲದೆ ನೀವು ನಿಮ್ಮ ಅಂಗಗಳನ್ನು ಪಾಪಕ್ಕೆ ಒಪ್ಪಿಸುವವರಾಗಿದ್ದು ದುಷ್ಟತ್ವವನ್ನು ನಡಿಸುವ ಸಾಧನಗಳಾಗ ಮಾಡಬೇಡಿರಿ.** ರೋಮ 6:13. ಇದಕ್ಕಿಂತ ಬುದ್ಧಿವಂತಿಕೆ ಇನ್ನೊಂದಿಲ್ಲ. ಉಳಿಯದ ಯಾವುದನ್ನಾದರೂ ನೀವೇ ಕೊಡಬೇಡಿ. ದೇವರ ಸದುದ್ದೇಶಗಳಿಗಾಗಿ ಉಪಯೋಗಿಸಲು ದೇವರ ಕೈಯಲ್ಲಿ ಸಾಧನವಾಗಲು ನಿಮ್ಮ ಪ್ರತಿಯೊಂದು ಭಾಗವನ್ನು ಸಂಪೂರ್ಣವಾಗಿ ದೇವರಿಗೆ ನೀಡಿ.

## ನೀವು ಯೇಸುವಿಗೆ ಏನು ಕೊಡುತ್ತೀರೀ?

ಈ ಋತುವಿನಲ್ಲಿ ನೀವು ಇತರ ಜನರಿಗೆ ನೀಡಲು ಉಡುಗೊರೆಗಳನ್ನು ಖರೀದಿಸಲು ಸಾಕಷ್ಟು ಸಮಯ ಮತ್ತು ಆಲೋಚನೆ ಮತ್ತು ಹಣವನ್ನು ವ್ಯಯಸಲಿದ್ದೀರಿ. ಈ ಕ್ರಿಸ್ತ ಜಯಂತಿಯ ಸಮಯದಲ್ಲಿ ಕರ್ತನಾದ ಯೇಸು ಕ್ರಿಸ್ತನಿಗೆ ಏನು ಕೊಡುತ್ತೀರೀ? ಹುಟ್ಟುಹಬ್ಬದ ಹುಡುಗನನ್ನು ಹೊರತುಪಡಿಸಿ ಎಲ್ಲರೂ ಪರಸ್ಪರ ಉಡುಗೊರೆಗಳನ್ನು ನೀಡುವ ಹುಟ್ಟುಹಬ್ಬದ ಸಂತೋಷಕೂಟವನ್ನು ನೀವು ಊಹಿಸಲು ಸಾಧ್ಯವಿಲ್ಲ. ನೀವು ಸಂಪೂರ್ಣವಾಗಿ ಯೇಸುವಿಗೆ ನೀಡುವ ಪ್ರಮುಖ ಕೊಡುಗೆ. ಅತ್ಯುತ್ತಮವಾದ ಕೊಡುಗೆ ನೀವು ಯೇಸುವಿಗೆ ನಿಮ್ಮ ಸಂಪೂರ್ಣ ಪ್ರೀತಿಯನ್ನು ಕೊಡಬಹುದು. ನಿಮ್ಮ ನಂಬಿಕೆ ಮತ್ತು ನಿಮ್ಮ ಗಮನವನ್ನು. ಆತನು ಸಂತೋಷವಾಗಿ ನಿಮ್ಮ ಯಾವುದೇ ಕೊಡುಗೆಗಳನ್ನು ಆತನು ಸ್ವೀಕರಿಸುವನು.

ಜೋಯಿಸರು ಸಂಪ್ರದಾಯದ ಕ್ರಿಸ್ತ ಜಯಂತಿಯ ಉಡುಗೊರೆಗಳನ್ನು ಕೊಡುವುದಕ್ಕೆ ಪ್ರಾರಂಭಿಸಿದರು. ಅವರು ಯೇಸುವಿಗೆ ಉಡುಗೊರೆಗಳನ್ನು ತಂದರು. ಈಗ ನಾವು ಒಬ್ಬರಿಗೊಬ್ಬರು ಉಡುಗೊರೆಗಳನ್ನು ಕೊಡುತ್ತೇವೆ. ಆದರೆ ಲೋಕವನ್ನು ಎಷ್ಟೋ ಪ್ರೀತಿಸಿದ ಕಾರಣ ಸಂಪೂರ್ಣ ಉಡುಗೊರೆಯನ್ನು ನೀಡಲಾಯಿತು, ಆತನು ತನ್ನ ಒಬ್ಬನೇ ಮಗನನ್ನು ಕೊಟ್ಟನು, ಆತನನ್ನು ನಂಬುವ ಒಬ್ಬನಾದರೂ ನಾಶವಾಗದೆ ನಿತ್ಯ ಜೀವವನ್ನು

RNI NO. 70107/98, Postal Regn. No. TN/CH (C)/195/21-23 WPP NO. TN/PMG(CCR)/WPP-219/21-23

ಹೊಂದುತ್ತಾನೆ. ದೇವರು ಮೊದಲ ಕ್ರಿಸ್ತ ಜಯಂತಿಯ ಉಡುಗೊರೆಯನ್ನು ಕೊಟ್ಟನು.

**ಈಗ ನಾಲ್ಕು ಸಂಗತಿಗಳು, ಯೋಸೇಫನು ಸಹಕರಿಸಿದನು ಮತ್ತು ಕುರುಬರು ಆಚರಿಸಿದರು ಮತ್ತು ಮರಿಯಳು ದೇವರ ವಾಕ್ಯವನ್ನು ಅಲೋಚಿಸಿದಳು ಮತ್ತು ಜೋಯಿಸರು ತಮ್ಮ ಉಡುಗೊರೆಗಳನ್ನು ಯೇಸುವಿಗೆ ಪವಿತ್ರಕರಿಸಿದರು. ಸ್ನೇಹಿತರೇ, ನೀವು ಏನು ಮಾಡಬೇಕೆಂದು ನಿರ್ಧರಿಸಿ ಮತ್ತು ದೇವರಿಂದ ಆಶೀರ್ವದಿಸಿ ಮತ್ತು ಆಶೀರ್ವಾದ ನಿಧಿಯಾಗಿರಿ!**

************

## OUR BANK DETAILS:

### *1. Bank : State Bank of India*

Branch : **Triplicane, Chennai-5**
Name : **S. Sam Selva Raj**
A/C No. : **1023 2934 679**
IFSC : **SBIN 00 00 249**
SWIFT CODE : **SBI NIN BB 455**

### *2. Bank : ICICI Bank*

Branch : **Anna Salai, Chennai-6**
Name : **Echo of His Call**
A/C No. : **6038 0502 2319**
IFSC : **ICIC 000 6038**

### *3. Bank : State Bank of India*

**(This Account is for Tax Exemption for Indians only )**

Branch : **Triplicane, Chennai-5**
Name : **Echo of His Call Educational Trust**
A/C No. : **1023 2923 805**
IFSC : **SBIN 00 00 249**

**Google Pay: 98410 71858**
**PayPal : SAM SELVA RAJ**
*****
**E.mail : sam@echoofhiscall.org**

# ECHO OF HIS CALL

Monthly magazines in 16 languages, Bible Colleges, Postal Courses, Church Planting, Village English High School, Gospel Printing Press, Crusades, Seminars, Social Services, etc.

Annual Subscription : Rs. 100/- Life Subscription : Rs. 2000/-

The multifarious activities of **Echo of His Call Ministries** are supported by the free-will offerings and donations of God's children like you. You may support **Echo of His Call** and its activities as the Lord leads you. We need your help to send forth the Gospel to the unreached people and plant Churches.

If you would like to receive **ECHO OF HIS CALL** magazines regularly, please write to us with your e.mail Id and Cell Phone number. Whenever you change your postal or e.mail addresses, please do inform us your old and new addresses.

**Echo of His Call** is available in 16 languages in our website also. You can read them by going into the site as well as downloading them and get blessed.

Your letters, prayer requests and your financial helps (**Money Orders, Cheques or Demand Drafts, NEFT, PayPal (Sam Selva Raj, sam@echoofhiscall.org) PhonePe (98410 71858), Gpay (98410 71858), Western Union, MoneyGram, etc.**) to **ECHO OF HIS CALL** may please be sent to the address below.

Please send your **Land Phone / Mobile Phone Numbers and E.mail addresses** for updation.

Our address :

**ECHO OF HIS CALL**
10, MOHAMMED ABDULLAH 2ND STREET, CHEPAUK, CHENNAI - 600 005, INDIA
PH: (+91-44) 2852 8282, 2852 9293, 2854 7766/ Cell: (+91) 98410 71852, 95661 31858 / E.mails: sam@echoofhiscall.org / biblecor@yahoo.co.in
Websites: www.echoofhiscall.org / www.stpaulsmatriculation.com

**YOU CAN SEND YOUR DONATION ONLINE ALSO**

**RNI NO. 70107/98**
**Postal Regn. No. TN/CH/(C)/195/21-23**
**WPP NO. TN/PMG(CCR)/WPP- 219/21-23**
**Date of Publication: Second week of every month**
**Date of Posting : 9th & 10th of every month**
**Posted at "Egmore RMS / 1 Patrika Channel"**
**on 10th DECEMBER, 2022**
**If un-delivered please return to:**
**ECHO OF HIS CALL (KANNADA)**
**P.O. Box No. 2957,**
**Chepauk, Chennai - 600 005, INDIA.**
**Phone: (+ 91- 44) 2852 8282, 2852 9293, 2854 7766**

***JESUS LOVES YOU!***

**To**

*GOD BLESS YOU!*

Owned and published by **S. Sam Selva Raj** from New No. 8 & 10, Old No. 18 & 19, Mohammed Abdullah 2nd Street, Chepauk, Chennai-600 005 and printed by him at **Echo of His Call Printers**, New No. 8 & 10, Old No. 18 & 19, Mohammed Abdullah 2nd Street, Chepauk, Chennai-600 005. Editor: **S. Sam Selva Raj.**